# 6

# ಉತ್ತರಿಸಿದ ಪ್ರಾರ್ಥನೆಯ ರಹಸ್ಯ

## (1 ಅರಸು 18:41-46)

ಅನೇಕ ಜನರು ಆ ದಿನದಲ್ಲಿ ಎಲೀಯನು ಬಾಳನ 450 ಪ್ರವಾದಿಗಳಿಗೆ ಸವಾಲನ್ನು ಒಡ್ಡಿ ಅವರನ್ನು ಕೊಂದದ್ದು ಆತನ ಜೀವದಲ್ಲೇ ದೊಡ್ಡ ದಿನ ಎಂದು ಭಾವಿಸಿದ್ದರು. ಕರ್ಮೆಲ್ ಬೆಟ್ಟದಲ್ಲಿ ಆದ ವಿವಾದದ ಬಗೆಗೆ ನಾವು ಓದಿದೆವು. ಬೆಂಕಿಯು ಕೆಳಗೆ ಬರುವುದನ್ನು ಮತ್ತು ಜನರು "ಯೆಹೋವನೇ ದೇವರು" ಎಂದು ಕೂಗುವುದನ್ನೂ ಮತ್ತು ಸುಳ್ಳು ಪ್ರವಾದಿಗಳ ಮೋಸತನವನ್ನೂ ಸಹ ಓದಿದೆವು. ಈ ಘಟನೆಯ ಕೊನೆಯಲ್ಲಿ ಸುಳ್ಳು ಪ್ರವಾದಿಗಳು ಕೀಷೋನ ಹಳ್ಳದ ದಂಡೆಯಲ್ಲಿ ಭಯಂಕರವಾದ ಗುಡ್ಡದಂತೆ ಬಿದ್ದಿದ್ದಾರೆ ಅದನ್ನು ಅರಸನು ನೋಡುತ್ತಿರುವಂತೆಯೇ ಆತನ ಕಣ್ಣುಗಳು ಬಟ್ಟಲಂತೆ ದೊಡ್ಡದಾದವು. ಆ ನಾಟಕವು ಮುಗಿಯಿತು ಎಂದು ನಾವು ಯೋಚಿಸಬಹುದು, ಈ ಅಧ್ಯಾಯದ ಕೊನೆಯ ಭಾಗದಲ್ಲಿ ಕೇವಲ ಅನುಬಂಧದಲ್ಲಿ "ದೇವರುಗಳ ಯುದ್ಧ" ಎಂದಿದೆ.

ಹಾಗಲ್ಲ: ಪರಾಕಾಷ್ಟತೆಯು ಇನ್ನೂ ಬರಬೇಕಿದೆ. 1 ಅರಸು 18:1ನ್ನು ನೋಡಿರಿ "ಅನೇಕ ದಿವಸಗಳಾದ ನಂತರ ಎಲೀಯನಿಗೆ ಯೆಹೋವನ ವಾಕ್ಯವುಂಟಾಯಿತು, ಬರಗಾಲದ ಮೂರನೆಯ ವರ್ಷದಲ್ಲಿ ಆತನು ಅವನಿಗೆ ನೀನು ಹೋಗಿ ಆಹಾಬನನ್ನು ಕಾಣು; ನಾನು *ಈ ದೇಶಕ್ಕೆ ಮಳೆಯನ್ನು ಕೊಡುತ್ತೇನೆ*" ಅಂದನು. 18ನೇಯ ಅಧ್ಯಾಯವು ಮಳೆಯನ್ನು ಕಳಿಸುವುದರ ಇದೆ. ಮಳೆಯು ಬರುವುದಕ್ಕೆ ಮುಂಚೆ, ಎಲೀಯನು ತನ್ನನ್ನು ತಾನು ಆಹಾಬನಿಗೆ ತೋರಿಸಿಕೊಂಡನು ಮತ್ತು ಎಲ್ಲಾ ಇಸ್ರಾಯೇಲ್ಯರನ್ನು ಕರ್ಮೆಲ್ ಬೆಟ್ಟಕ್ಕೆ ಕರೆ ತರಬೇಕೆಂದೂ ಅಲ್ಲಿ ತಾನು ಸಾಮೂಹಿಕ ಪಶ್ಚಾತ್ತಾಪದ ಪ್ರಯೋಜನಕವನ್ನು ಅವರ ಬಳಿಗೆ ತರುವುದಾಗಿಯೂ ಹೇಳಿದನು. ಒಂದು ಸಾರಿ ಅದು ಪರಿಪೂರ್ಣವಾದಾಗ, ವಾಗ್ದಾನವೂ ಕೂಡ ಸಂಪೂರ್ಣವಾಯಿತು.

ನಾವು ನೋಡಬಹುದಾದಂತೆ, ಆ ವಾಗ್ದಾನವು ಪರಿಪೂರ್ಣವಾಯಿತು. ಪ್ರಾರ್ಥನೆಯ ಮುಖ್ಯವಾದ ಪಾಠವು 1 ಅರಸು 18:41-46ರಲ್ಲಿ ನಾವು ಪರೀಕ್ಷಿಸಿ ಕೊಂಡಂತೆ "ಉತ್ತರಿಸಿದ ಪ್ರಶ್ನೆಯ ರಹಸ್ಯ" ಎಂಬುದನ್ನು ಕಲಿಯಬಹುದಾಗಿದೆ.

ಪ್ರಾರ್ಥನೆಯ ಎರಡು ದೊಡ್ಡ ಉದಾಹರಣೆಗಳನ್ನು ಹೆಸರಿಸಿರಿ ಎಂದು ನಮಗೆ ಕೇಳಿದರೆ? ನಾವು ಬಹುಶಃ ಯೇಸು ಪೌಲರನ್ನು ಹೆಸರಿಸಬಹುದು. ಒಂದು ವೇಳೆ ಹಳೆಯ ಒಡಂಬಡಿಕೆಯನ್ನು ನಾವು ಮಿತಿಗೆ ಒಳಪಡಿಸಿದರೆ, ಬಹುಶಃ ನಾವು ದಾವೀದನನ್ನು ಹೆಸರಿಸಬಹುದು. ಯಾಕೋಬನು ತನ್ನ ಪತ್ರಿಕೆಗಳಲ್ಲಿ ಅಸ್ಪಷ್ಟವಾದ ಚಿತ್ರಣವನ್ನು ಇಟ್ಟಿದ್ದಾನೆ.

ಯಾಕೋಬನ ಆಯ್ಕೆಯನ್ನು ವಿಮರ್ಷಿಸುವಂತೆ ಎರಡು ಸತ್ಯಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು: 1) ಕ್ರೈಸ್ತರಿಗೆ ಬರೆದ ಇತರೆ ಪತ್ರಗಳು ಹೇಳುವುದಕ್ಕಿಂತ ಹೆಚ್ಚಾಗಿ ಯಾಕೋಬನ ಚಿಕ್ಕ ಪತ್ರಿಕೆಯು ಪ್ರಾರ್ಥನೆಯ ಬಗೆಗೆ ಹೆಚ್ಚಾಗಿ ಹೇಳುತ್ತದೆ. 2) ಯಾಕೋಬನು ತಾನೇ ಒಬ್ಬ ಶ್ರೇಷ್ಟ ಪ್ರಾರ್ಥನಾ ವೀರನಾಗಿದ್ದಾನೆ ಯಾಕೋಬನ ಮೊಣಕಾಲುಗಳು ಬಹಳ ಸಮಯದವರೆಗೆ ಆತನು ಪ್ರಾರ್ಥನೆಯಲ್ಲಿ ಕಳೆಯುತ್ತಿದ್ದುದರಿಂದ ಆತನ ಮೊಣಕಾಲು ಒಂಟೆಯ ಕಾಲುಗಳಂತೆ ಗಟ್ಟಿಯಾಗಿದ್ದವೆಂದು ಹೇಳಿಕೆಯು ಇದೆ.

ಯಾಕೋಬನು ಯಾರನ್ನು ಆರಿಸಿಕೊಂಡನು?

> ಹೀಗಿರಲು ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ; ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ. ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು; ಅವನು ಮಳೆಬಾರದೆಂದು ಬಹಳವಾಗಿ ಪ್ರಾರ್ಥಿಸಲು ಮೂರು ವರುಷ ಆರು ತಿಂಗಳವರೆಗೂ ಮಳೆ ಬೀಳಲಿಲ್ಲ. ತಿರಿಗಿ ಅವನು ಪ್ರಾರ್ಥನೆ ಮಾಡಲು ಅವಾಶವು ಬೆಳೆಯಿತು (ಯಾಕೋಬ 5:16-18).

ಎಲೀಯನ ಜೀವನದಿಂದ ಆತನು ಆಯ್ದುಕೊಂಡ ಉದಾಹರಣೆಯನ್ನು ಗಮನಿಸಿರಿ: ಪ್ರಾರ್ಥನೆಯ ಮೂಲಕ ಆ ಹುಡುಗನನ್ನು ಎಬ್ಬಿಸಿದ ಆ ಹುಡುಗನ ಘಟನೆಯಲ್ಲ. ಪ್ರಾರ್ಥನೆಯಿಂದ ಬೆಂಕಿಯನ್ನು ಕೆಳಗೆ ತರಿಸಿದ ಘಟನೆಯೂ ಅಲ್ಲ. ಆದರೆ ಪ್ರಾರ್ಥನೆಯು ಮೂಲಕ ಮಳೆಯನ್ನು ನಿಲ್ಲಿಸಿತು ಮತ್ತು ಮಳೆಯನ್ನು ತಿರುಗಿ ಬರುವಂತೆ ಮಾಡಿದ ಘಟನೆಯನ್ನು ಆತನು ಆಯ್ಕೆ ಮಾಡಿಕೊಳ್ಳುತ್ತಾನೆ.

1 ಅರಸು 18:41-46 ಮತ್ತು ಯಾಕೋಬ 5:16-18ನ್ನು ಜೊತೆ ಜೊತೆಯಾಗಿ "ಉತ್ತರಿಸಿದ ಪ್ರಶ್ನೆಯ ರಹಸ್ಯವನ್ನು" ಶೋಧಿಸಲು ನಾವು ಪರೀಕ್ಷಿಸುವಾ.

## ಒಂದು ಶಕ್ತಿಯುತವಾದ ಪ್ರಾರ್ಥನೆ

ಈ ಕಥೆಯನ್ನು ಪುನರಾವರ್ತಿಸಿಕೊಳ್ಳುವ. ಎಲೀಯನು ಮನುಷ್ಯರಿಂದ ಅಡುಗುವಿಕೆ ಮತ್ತು ಇತರ ಮನುಷ್ಯರೊಡನೆ ಎದುರಿಸುವಿಕೆ ಇವುಗಳನ್ನು ನಾವು ನೋಡಿದ್ದೇವೆ ಈಗ ನಾವು ದೇವರೊಡನೆ ಸಂಪರ್ಕದಲ್ಲಿರುವ ಆತನನ್ನು ನೋಡೋಣ.

"ಅನಂತರ ಎಲೀಯನು ಆಹಾಬನಿಗೆ ನೀನು ಮೇಲೆ ಹೋಗಿ ಅನ್ನ ಪಾನಗಳನ್ನು ತೆಗೆದುಕೋ" (1 ಅರಸು 18:41ಎ) ಎಂದನು. ಆಹಾಬನು ಈಗ ಪ್ರತ್ಯಕ್ಷವಾಗಿ ಎಲೀಯನೊಡನೆ ಇದ್ದಾನೆ ಮತ್ತು ಬಾಳನ ಪ್ರವಾದಿಗಳು ಬೆಟ್ಟದ ಪಾದವಾದ ಕೀಷೋನ್ ಹಳ್ಳದಲ್ಲಿದ್ದಾರೆ. ಆತನು ಬಹುಶಃ ದಿನವೆಲ್ಲ ಏನೂ ತಂದಿರಲಿಕ್ಕಿಲ್ಲ. ಅಂತೆಯೇ ಎಲೀಯನು ಆತನಿಗೆ ಮೇಲೆ ಹೋಗು ನಿನ್ನ ಬಲವನ್ನು ಪುನಃ ತುಂಬಿಸಿಕೊ ಎಂದು ಹೇಳುತ್ತಾನೆ.

ಬಾಳನ ಪ್ರವಾದಿಗಳೊಡನೆ ಆತನು ವ್ಯವಹರಿಸದ ರೀತಿಗೆ ಇದು ತದ್ವಿರುದ್ಧವಾಗಿದೆ. ನಾವು ಬಹುಶಃ "ಅದು ಸರಿಯಾದುದಲ್ಲ. ಇಜೆಬೇಲಳನ್ನು ಮದುವೆಯಾದಗಿನಿಂದ ಮತ್ತು ಇಜಬೇಲಳು ಬಾಳನ ಪ್ರವಾದಿಗಳನ್ನು ತರುವುದಕ್ಕೂ ಈತನೊಬ್ಬನೇ ಜವಾಬ್ದಾರಿ. ಈ ಆ ಸುಳ್ಳು ಪ್ರವಾದಿಗಳು ಕೊಲ್ಲಲ್ಪಟ್ಟರು, ಆದರೆ ಆಹಾಬನು ಊಟಕ್ಕಾಗಿ ಆಮಂತ್ರಿತನಾಗಿದ್ದಾನೆ!" ಎಂದು ನೀವು ವಿರೋಧಿಸಬಹುದು.

ಆ ಸಂಗತಿಯನ್ನು ಪರಿಗಣಿಸುವ ಅವಶ್ಯಕತೆಯು ನಮಗಿದೆ. ಹಳೆಯ ಒಡಂಬಡಿಕೆಯ ಉದ್ದಕ್ಕೂ ದೇವರ ಅಭಿಷಕ್ತನನ್ನು ಗೌರವಿಸಬೇಕು ಎಂಬುದು ಒತ್ತಿ ಹೇಳುತ್ತಾ ಬಂದಿದೆ (ದಾವೀದನು ಸೌಲನನ್ನು ಗೌರವಿಸಿದ್ದು ಯಾಕೆಂದರೆ ಆತನು: "ದೇವರ ಅಭಿಷಕ್ತನಾಗಿದ್ದನು" 1 ಸಮುವೇಲ 24:10 ಮುಂತಾದವು). ಒಬ್ಬ ಮನುಷ್ಯನು ತನ್ನಷ್ಟಕ್ಕೆ ತಾನೇ ಅವನೇನೂ ಆಗಿರುವುದಿಲ್ಲ, ಆತನು ಹೊಂದಿದ ಆ ಸ್ಥಾನಕ್ಕೆ ದೇವರು ಆತನನ್ನು ನೇಮಿಸಿರುತ್ತಾನೆ, ಆದ್ದರಿಂದ ಅಲ್ಲಿ ಆ ಸ್ಥಾನಕ್ಕೆ ಅಗೌರವ ಇರುವದು. ಅದಕ್ಕೆ ಸರಿಯಾಗಿ ಹೊಸ ಒಡಂಬಡಿಕೆಯಲ್ಲಿ ನಾವು ಬುದ್ಧಿಹೀನರಾದರೂ ದೇವರಿಂದ ಆಯ್ಕೆಯಾದ ಅಧಿಕಾರಿಗಳನ್ನು ನಾವು ಗೌರವಿಸಲೇಬೇಕು, ಅವರು ಸಮರ್ಥರಾಗಿದ್ದಾರೆ ಎಂದಲ್ಲ, ಆದರೆ ಅವರು ಹೊಂದಿದ ಸ್ಥಾನಕ್ಕಾಗಿಯೇ (ರೋಮಾಪುರ 13:1 ಹೋಲಿಸಿ).

ಎಲೀಯನು ಮುಂದುವರೆಸುತ್ತಾ "ದೊಡ್ಡ ಮಳೆಯ ಶಬ್ದವು ಕೇಳಿಸುತ್ತದೆ ಅಂದನು" (ವಚನ 41ಬಿ). ಇದೊಂದು ಬಾಹ್ಯವಾದ ಸದ್ದು ಅಲ್ಲ. ಆಕಾಶದಲ್ಲಿ ಯಾವುದೇ ಮೋಡವು ಇರಲಿಲ್ಲ (ಗಮನಿಸಿ ವಚನ 43). ಎಲೀಯನು ಮಳೆಯ ಸದ್ದನ್ನು ತನ್ನ ನಂಬಿಕೆಯ

ಕಿವಿಗಳಿಂದ ಕೇಳಿದ್ದನು. ದೇವರು ಆತನಿಗೆ 'ನೀನು ಆಹಾಬನನ್ನು ಕಾಣು; ನಾನು ದೇಶಕ್ಕೆ ಮಳೆಯನ್ನು ಕೊಡುತ್ತೇನೆ" ಅಂದನು (ವಚನ 1). ಎಲೀಯನು ದೇವರ ಶರತ್ತಿಗೆ ನಂಬಿಗಸ್ತನಾಗಿದ್ದನು. ಇದು ಮಳೆಯು ಬರುವುದಕ್ಕೆ ಇರುವ ಸಮಯವಾಗಿತ್ತು, ಎಲೀಯನು ಅದಾಗುತ್ತದೆ ಎಂದು ನಂಬಿದ್ದನು.

"ಆಹಾಬನು ಅನ್ನಪಾನಗಳನ್ನು ತೆಗೆದುಕೊಳ್ಳವುದಕ್ಕೆ ಹೋದಾಗ ಎಲೀಯನು ಕರ್ಮೆಲಿನ ತುದಿಗೆ ಹೋದನು" (ವಚನ 42ಅ). ಇಬ್ಬರೂ ಬೆಟ್ಟದ ಮೇಲೆ ಜೊತೆಯಾಗಿಯೇ ಹೋದರು ಎಲೀಯನು ಇನ್ನೂ ಎತ್ತರಕ್ಕೆ ಹೋದನು. ಅವರ ಹೋಗುವುದಕ್ಕಾಗಿ ಇರುವ ವ್ಯತ್ಯಾಸವನ್ನು ಗಮನಿಸಿರಿ: ಆಹಾಬನು ತಿನ್ನಲು ಕುಡಿಯಲು ಹೋದರೆ, ಎಲೀಯನು ಪ್ರಾರ್ಥಿಸಲು ಕರ್ಮೆಲ ಬೆಟ್ಟದ ತುದಿಗೆ ಹೋಗುತ್ತಾನೆ. "ಅಲ್ಲಿ ನೆಲದ ಮೇಲೆ ಬಿದ್ದು ಕೊಂಡು ಮೊಣಕಾಲಿನ ಮೇಲೆ ತಲೆಯನ್ನಿಟ್ಟನು" (ವಚನ 42ಬಿ). ಎಲೀಯನು ಮೊಣಕಾಲೂರಿದನು ಮತ್ತು ಮುಂದಕ್ಕೆ ಬಿದ್ದನು, ದೇವರೆದುರು ಬೊಗ್ಗಿದನು "ಪ್ರಾರ್ಥನೆ" ಎಂಬ ಪದವು ಈ ಕಥೆಯಲ್ಲಿ ಉಪಯೋಗವಾಗಿಲ್ಲ, ಅಥವಾ ಎಲೀಯನು ಹೇಳಿದ್ದಾನೆ ಎಂದೂ ನಮಗೆ ಹೇಳಿಲ್ಲ. ಈ ಸಂದರ್ಭದಲ್ಲಿ ನಿಶ್ಚಿತವಾಗಿ ಆತನು ಪ್ರಾರ್ಥಿಸುತ್ತಿದ್ದನು, ಮತ್ತು ಯಾಕೋಬನು ಅದನ್ನೇ ಮಾಡಿದನು ಎಂದು ಖಂಡಿತವಾಗಿ ಹೇಳುತ್ತಾನೆ (ಯಾಕೋಬ 5).

ಇದು ನನಗೆ ಆಗಿದ್ದರೆ, ನಾನು ಮೇಲಕ್ಕೆ ಹೋಗಿ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದೆನು. "ಈಗ ಬಹಳ ತಡವಾಗಿದೆ. ಇದೊಂದು ಬಹಳ ಕಷ್ಟದ ದಿನವಾಗಿತ್ತು. ನನಗನ್ನಿಸುತ್ತದೆ ನಾನು ಹಾಸಿಗೆಗೆ ಹೋಗಲು ನಾನು ಸಿದ್ಧವಾಗಬೇಕು ಎಂದು." ನಾನು ಮುಂಜಾನೆಯ ವಿಜಯೋತ್ಸವದ ಕವಾಯಿತಿಗಾಗಿ ನಾನು ಸಿದ್ಧನಾಗುತ್ತಿದ್ದೆನೇನೋ. ಎಲೀಯನು ಪ್ರಾರ್ಥಿಸಲು ಹೋದನು. ನಾವು "ವಾಗ್ದಾನಗಳ ಮೇಲೆ ನಿಲ್ಲುವದು" ಎಂದು ಹಾಡುತ್ತೇವೆ. ಎಲೀಯನು ವಾಗ್ದಾನಗಳ ಮೇಲೆ ನಿಂತನು.

"ಆಮೇಲೆ ತನ್ನ ಸೇವಕನಿಗೆ ನೀನು ಮೇಲೆ ಹೋಗಿ ಸಮುದ್ರದ ಕಡೆಗೆ ನೋಡು ಎಂದು ಆಜ್ಞಾಪಿಸಿದನು" (ವಚನ 43ಎ). ಎಲೀಯನಿಗೆ ಸೇವಕನಿದ್ದನು ಎಂಬುದನ್ನು ಇದೇ ಮೊದಲ ಸಾರಿ ಓದುತ್ತೇವೆ. ಮುಂದಿನ ಅಧ್ಯಾಯದಲ್ಲಿ ನಮಗೆ ಅವನ ಕೆಲಸಂಗತಿಗಳು ಸಿಕ್ಕುತ್ತವೆ, ಮತ್ತು ನಂತರ ಆತನು ಕಥೆಯಿಂದ ಹೋಗಿಬಿಡುತ್ತಾನೆ. ಅಲ್ಲಿ ಯೆಹೂದ್ಯರ ಒಂದು ಸಂಪ್ರದಾಯವಿತ್ತು, ಅದು ಯಾವುದೇ ಒಳ್ಳೇಯದಿರಲಿ ಅದು ಎಲೀಯನು ಮರಣದಿಂದ ರಕ್ಷಿಸಿದ ಚಾರೆಪ್ತಾದ ವಿಧವೆಯ ಮಗನದ್ದೇ ಆಗಿರುತ್ತದೆ.[1] ಆತನು ಯಾರೇ ಆಗಿರಲಿ ಎಲೀಯನು ಆತನಿಗೆ, "ಹೋಗಿ ಸಮುದ್ರ ಕಡೆಗೆ ನೋಡು" ಎಂದು ಹೇಳಿದನು. ಈ ಪ್ರಾರ್ಥನೆಯ ಸಂಪ್ರದಾಯಕವಾದ ಸ್ಥಳವು ಇದೊಂದು ಚಿಕ್ಕದಾದ ಹತ್ತುವಿಕೆಯನ್ನು ಹೊಂದಿದ್ದು ಬಹುಶಃ ಹದಿನೈದರಿಂದ ಇಪ್ಪತ್ತು ಯಾರ್ಡುಗಳಷ್ಟು ಸಮೀಪ ಇದ್ದು ಸೇವಕನಿಗೆ ಮೆಡಿಟರೇನಿಯನ್ ಸಮುದ್ರದ ಒಳ್ಳೇಯ ದೃಷ್ಯವು ಸಿಕ್ಕುವ ಎತ್ತರವಾದ ಸ್ಥಳವು ಆಗಿತ್ತು.

"ಸೇವಕನು ಹೋಗಿ ನೋಡಿ ಬಂದು ಏನೂ ತೋರುವುದಿಲ್ಲ ಎಂದು ಹೇಳಿದನು. ಹೀಗೆ ಅವನನ್ನು ಏಳು ಸಾರಿ ಕಳುಹಿಸಿದನು" (ವಚನ 43ಬಿ). ಸುತ್ತನ್ನು ಎಣಿಸಲು ಎಲೀಯನು ಯಾವುದೇ ರೀತಿಯ ತರಬೇತುದಾರನಲ್ಲ. "ಅದು ಒಂದು ಸಾರಿ ಅದು ಎರಡು ಸಾರಿ, ಇದು ಮೂರನೆಯ ಸಾರಿ" ಎಂದು ಎಣಿಸುತ್ತಿರಲು ಸಾಕು. ಬದಲಾಗಿ ಅಲ್ಲಿ ಘಟನೆಗಳ ಪುನರ್ವರ್ತನೆಯು ಆಗಿರಲು ಸಾಕು. ಎಲೀಯನು ಪ್ರಾರ್ಥಿಸಿದ ನಂತರ ಆತನು ತನ್ನ ಸೇವಕನಿಗೆ "ಹೋಗಿ ನೋಡು" ಎಂದು ಹೇಳಿದನು. ಆ ಸೇವಕನು ಹಾಗೇ ಮಾಡಿದನು ಮತ್ತು ತಿರುಗಿ ಬಂದು ಹೇಳಿದನು "ಅಲ್ಲಿ ಏನೂ ಇಲ್ಲ" ಎಂದು. ಎಲೀಯನು ಇನ್ನೂ ಕೆಲ ಸಮಯದವರೆಗೆ ಪ್ರಾರ್ಥಿಸಿದನು. ಮತ್ತು ಹೇಳಿದನು "ಎರಡನೆಯ ಸಾರಿ ಪರೀಕ್ಷಿಸಿ ಬಾ" ಎಂದನು ಆ ಸೇವಕನು ಹಾಗೇ ಮಾಡಿದನು ಮತ್ತು ತಿರುಗಿ ಬಂದು ಹೇಳಿದನು "ಅಲ್ಲಿ ಇನ್ನೂ ಏನೂ ಇಲ್ಲ" ಹೀಗೆ ಅದು ಮೂರನೆಯ ಬಾರಿ ನಾಲ್ಕನೆಯ ಬಾರಿ, ಐದನೆಯಬಾರಿ, ಆರನೆಯ

ಬಾರಿ, ಹೀಗೆ ಏಳನೆಯ ಬಾರಿಯವರೆಗೆ ಹೋಯಿತು.

"ಏಳನೆಯ ಸಾರಿ ಸೇವಕನು ಅಂಗೈಯಷ್ಟು ಚಿಕ್ಕದಾದ ಮೋಡವು ಸಮುದ್ರದಿಂದ ಏರಿಬರುತ್ತಲಿದೆ ಎಂದು ತಿಳಿಸಿದನು" (ವಚನ 44ಎ). ಇದು ಕೇವಲ ಮೋಡವಾಗಿದ್ದು ಇದು ಎಷ್ಟು ಚಿಕ್ಕದಿತ್ತೆಂದರೆ ಮನುಷ್ಯನ ಅಂಗೈಯ ಅಗಲದಷ್ಟು ಇತ್ತು, ಇದು ಎಲೀಯನಿಗೆ ಸಾಕಷ್ಟಾಯಿತು.

"ಆಗ ಎಲೀಯನು ಅವನಿಗೆ ನೀನು ಹೋಗಿ ಆಹಾಬನಿಗೆ ಬೇಗನೆ ರಥವನ್ನು ಹೂಡಿಸಿಕೊಂಡು ಮಳೆಯು ನಿನ್ನನ್ನು ತಡೆಯದಂತೆ ಬೆಟ್ಟವನ್ನಿಳಿದು ಹೋಗು ಎಂದು ಹೇಳು ಅಂದಳು" (ವಚನ 44ಬಿ). ಈ ಸಿದ್ಧತೆಯ ಅವಶ್ಯಕತೆಯ ಬಗೆಗೆ ನನಗೆ ಖಚಿತವಿಲ್ಲ. ಕೆಲವರು ಹೀಗೆ ಸೂಚಿಸುತ್ತಿದ್ದರು ಆಹಾಬನು ತನ್ನ ಮಳೆಯ ಕವಚವನ್ನು ಹಾಕಿಕೊಳ್ಳ ಬೇಕಿತ್ತು ಅಥವಾ ರಥದ ಮೇಲ್ಭಾಗವನ್ನು ಹೊದಿಕೆಯಿಂದ ಮುಚ್ಚಬೇಕಿತ್ತು. ಆತನು ಬಹುಶಃ ಸಂಪೂರ್ಣ ಹೊದಿಕೆಯನ್ನು ಹೊಚ್ಚಬೇಕಿತ್ತು. ಕೀಷೋನ್ ಹಳ್ಳವು ಕೊಳಚೆ ನೆಲವಾಗುವದಕ್ಕೆ ಮುಂಚೆಯೇ ಮತ್ತು ಇಜ್ರೇಲಿನ ರಸ್ತೆಗಳು ದುರ್ಗಮವಾಗುವ ಮೊದಲೇ ಅವನು ಅದನ್ನು ಬಿಡುವುದು ಅವಶ್ಯವಾಗಿತ್ತು.[2]

"ತುಸು ಹೊತ್ತಿನಲ್ಲಿಯೇ ಆಕಾಶವು ಮೋಡಗಾಳಿಗಳಿಂದ ಕಪ್ಪಾಗಿ ದೊಡ್ಡ ಮಳೆಯು ಪ್ರಾರಂಭವಾಯಿತು" (ವಚನ 45ಎ). ಈ ಮಳೆಯು ಇಂದು ನಾವು ಕೆಲಸಾರಿ ಪಡೆಯುವಂತಹ ಕೇವಲ ತುಂತರನ್ನು ಅಣುಕಿಸುವಂತೆ ಕೆಲಸಾರಿ ಬಹಳ ಒಣವಾದಾಗ ಅಲ್ಪ ಕಾಲದ ತುಂತರಿನಂತಿದ್ದು ಧೂಳನ್ನೂ ಕೂಡ ಓಡಿಸದಷ್ಟಾಗಿರುವಂತದ್ದಾಗಿರುತ್ತದೆ, ಆದರೆ ನಿಜವಾಗಿಯೂ "ಅದು ಚರಂಡಿಗಳನ್ನು-ತೊಳೆಯುವಂತದ್ದು" ಅಥವಾ ನಿಮ್ಮ ದೇಶದಲ್ಲಿ ಅದನ್ನು ಏನನ್ನು ಅನ್ನುತ್ತಾರೋ ಅದೇ ಆಗಿರುತ್ತದೆ.

"ಆಹಾಬನು ರಥದಲ್ಲಿ ಕೂತುಕೊಂಡು ಇಜ್ರೇಲಿಗೆ ಹೋದನು" (ವಚನ 45ಬಿ). ಇಜ್ರೇಲಿಗೆ ಅಲ್ಲಿಂದ ಸುಮಾರು ಹದಿನೈದು ಅಥವಾ ಇಪ್ಪತ್ತು ಮೈಲಿ ಆಗುತ್ತದೆ. ಸಮಾರ್ಯವು ಇಸ್ರಾಯೇಲಿನ ರಾಜಧಾನಿ ಆಗಿತ್ತು, ಆದರೆ ಅರಸನು ತನ್ನ ಅರಮನೆಯನ್ನು ಇಜ್ರೇಲಿನಲ್ಲಿಯೂ ಸಹ ಹೊಂದಿದ್ದನು,[3] ಮತ್ತು ಆಹಾಬನು ಅಲ್ಲಿ ವಾಸವಾಗಿದ್ದನು.

"ಯೆಹೋವನ ಹಸ್ತವು ಎಲೀಯನ ಸಂಗಡ ಇದ್ದುದರಿಂದ ಅವನು ನಡುಕಟ್ಟಿಕೊಂಡು ಆಹಾಬನ ಮುಂದೆ ಓಡುತ್ತಾ ಇಜ್ರೇಲನ್ನು ಸೇರಿದನು" (ವಚನ 46). ಎಲೀಯನು ತನ್ನ ಉದ್ದನೆಯ ನಿಲುವಂಗಿಯನ್ನು ಕೂಡಿಸಿಕೊಂಡನು ಮತ್ತು ತಳವನ್ನು ತನ್ನ ಸೊಂಟದ ಪಟ್ಟಿಯಿಂದ ಮಡಿಕೆಮಾಡಿದನು ಹೀಗೆ ಮಾಡುವುದರಿಂದ ಆತನ ಕಾಲುಗಳು ಮುಂದಕ್ಕೆ ಚಾಚಲು ನಿರಾಳವಾಗುತ್ತಿತ್ತು. ಆಹಾಬನು ಆತನಿಗಿಂತ ಮೊದಲೇ ಪ್ರಾರಂಭಿಸಿದ್ದನು, ಆದರೆ ಎಲೀಯನು ಅವನ ಬದಿಯಲಿಂದಲೇ ದಾಟಿ ಹೋದನು. ಎಂಥ ಅದ್ಭುತ ದಿನ!

ಎಲೀಯನ ಪ್ರಾರ್ಥನೆಯು ಎಷ್ಟು ಅದ್ಭುತವಾಗಿ ಉತ್ತರಿಸಿತು! ಈ ಉತ್ತರಿಸಿದ ಪ್ರಾರ್ಥನೆಯಲ್ಲಿ ಮೂರು ಪರಿಣಾಮಗಳು ಇವೆ:

ಮೊದಲು, ಇದು ಸಮಗ್ರ ಭೂಮಿಯನ್ನು ಆಶೀರ್ವದಿಸಿತು, ಇದೊಂದು "ರಭಸದ ಮಳೆಯಾಗಿತ್ತು" ಇದು ಅವಶ್ಯಕವಾದ ಕೆರೆ ಸಾಗರಗಳು ತುಂಬಲು ಅವಶ್ಯಕವಾದದ್ದು ಮಾತ್ರವಲ್ಲ, ಅದರ ಜೊತೆಗೆ ಕಡಲಚಾಚುಗಳು ಪ್ರಾರಂಭವಾದವು ಮತ್ತು ನದಿಗಳು ತಿರುಗಿ ಹರಿಯತೊಡಗಿದವು. ಭೂಮಿಯಲ್ಲಿ ನೀರಿನ ಮಟ್ಟವು ಏರತೊಡಗಿತ್ತು. "ಆಕಾಶವು ಮಳೆಗರೆಯಿತು ಭೂಮಿಯು ಬೆಳೆಯಿತು" (ಯಾಕೋಬ 5:18).

ಎರಡನೆಯದಾಗಿ, ಅದು ಎಲೀಯನನ್ನು ಆಶೀರ್ವದಿಸಿತು. ಎಲೀಯನು ಆಹಾಬನ ರಥವನ್ನು ಹಿಂದಕ್ಕೆ ಅಟ್ಟಲು ಹೇಗೆ ಸಮರ್ಥನಾದನು? ಅದು ಉದ್ದನೆಯ ಮತ್ತು ಶ್ರಮದಾಯಕ ವಾದ ದಿನ ಆದಾಗಿತ್ತು. ಬಹುಶಃ ಇಡೀ ದಿನದವರೆಗೂ ಆತನು ಏನನ್ನೂ ತಿಂದಿರಲಿಕ್ಕಿಲ್ಲ. ವಚನ 46 ಹೇಳುವಂತೆ "ಯೆಹೋವನ ಹಸ್ತವು ಆತನ ಮೇಲೆ ಇತ್ತು." ಪ್ರಾರ್ಥನೆಯು

ಸಾಮರ್ಥ್ಯವಾಗಿದೆ. ಇದು ಯಾರು ಪ್ರಾರ್ಥಿಸುವವರಾಗಿರುತ್ತಾರೋ ಅವರನ್ನು ಅಷ್ಟೇ ಅಲ್ಲ ಇನ್ನೊಬ್ಬರಿಗಾಗಿ ಮಾಡಿದ ಪ್ರಾರ್ಥನೆಯೂ ಕೂಡ ಆಶೀರ್ವದಿಸುವಂತದ್ದಾಗಿರುತ್ತದೆ.

ಮೂರನೆಯದಾಗಿ, ಇದು ಆಹಾಬನಿಗೆ, ಅವನ ಮೂಲಕ ದೇಶಕ್ಕೆಲ್ಲ ಆಶೀರ್ವಾದದ ಸಾಮರ್ಥ್ಯವನ್ನು ಕೊಟ್ಟಿತು. ಆಹಾಬನ ಜೀವವು ಉಳಿಯಿತು. ಇದೆಲ್ಲವೂ ಸಂಭವಿಸಿದ್ದನ್ನು ಆತನು ನೋಡಿದ್ದನು. ಆತನು ದೇವರ ಅಭಿಷಕ್ತನಾಗಿರುವುದಕ್ಕಾಗಿ ಮತ್ತು ಆತನ ದೇಶವನ್ನು ನಡೆಸುವದಕ್ಕಾಗಿ ಇನ್ನೊಂದು ಅವಕಾಶವು ಆತನಿಗೆ ಕೊಡಲ್ಪಟ್ಟಿತು.

ಒಂದು ಕ್ಷಣ, ನಿಮ್ಮನ್ನು ಆಹಾಬನ ಸ್ಥಳದಲ್ಲಿ ಇಟ್ಟುಕೊಂಡು ನೋಡಿರಿ. ನೀವು ನಿಮ್ಮನ್ನು ನೀವು ನಿಮ್ಮ ರಥದಲ್ಲಿ ಇದ್ದೀರಿ, ಇಜ್ರೇಲಿಗೆ ಮರಳುತ್ತಿದ್ದೀರಿ. ಹೆಚ್ಚು ಕಡಿಮೆ ಮಳೆಯು ನಿಮ್ಮನ್ನು ಆವರಿಸಿದೆ. ಆಕಾಶವು ಮೋಡಗಳಿಂದ ಕಪ್ಪಾಗಿದೆ. ನೀನು ಸ್ಪಷ್ಟವಾಗಿ ನೋಡ ಬಹುದು. ಮಳೆಯು ರಭಸದಿಂದ ಬೀಳುತ್ತಿದೆ, ನಿಮ್ಮ ರಾಜಪೋಷಾಕವು ವದ್ದೆಯಾಗುತ್ತಿದೆ. ತಂಪಾದ ಮಳೆಯು ನಿನ್ನ ಮೇಲೆ ಮತ್ತು ನಿನ್ನ ಮುಖದ ಮೇಲೆ ಹೊಡೆಯುತ್ತಿದ್ದು ನೈಜತ್ವವನ್ನು ಎದುರಿಸಲು ಒತ್ತಾಯಿಸುತ್ತಿದೆ. ನಿನ್ನ ಮನಸ್ಸು ಈ ಎಲ್ಲಾ ಸಂಭವಿಸಿದವುಗಳೆಡೆಗೆ ಹೊರಳುತ್ತದೆ: ಈ ಕಾಡು ಮನುಷ್ಯ ಎಲೀಯನು ಎಲ್ಲಿಂದ ಕಾಣಿಸಿಕೊಂಡನು ಮತ್ತು ಆತನು ಹೇಳುವವರೆಗೆ ಮಳೆ ಬರುವುದಿಲ್ಲವೆಂದು ಆತನು ಹೇಳಿದನು. ನಂತರ ಆತನು ಈ ಭೂಮಿಯಿಂದ ತನ್ನ ಮುಖವನ್ನು ಅಡಗಿಸಿಬಿಟ್ಟನು, ಮತ್ತು ಮೂರುವರೆ ವರ್ಷಗಳವರೆಗೆ ಮಳೆಯು ಆಗಲಿಲ್ಲ. ತದನಂತರ ಆತನು ಕಾಣಿಸಿಕೊಂಡನು ಮತ್ತು ಪ್ರತಿಯೊಬ್ಬರನ್ನೂ ಕರ್ಮೆಲ್ ಬೆಟ್ಟಕ್ಕೆ ಕರೆತರಲು ಹೇಳಿ ದನು, ಅದರಂತದ್ದನ್ನು ನೀನೆಂದು ಕಾಣಲಾರಿ: ಅಲ್ಲಿ ಆಕಾಶದಿಂದ ಬೆಂಕಿಯು ಬಿತ್ತು, ಜನರು ಕೂಗತೊಡಗಿದರು, ಮತ್ತು ಬಾಳನ 450 ಪ್ರವಾದಿ ಗಳು ಕೊಲ್ಲಲ್ಪಟ್ಟರು. “ನಾನೇನು ಮಾಡಬೇಕು?” ಎಂದು ನೀನು ಯೋಚಿಸು.

ನಿನ್ನ ಹಿಂದಿನಿಂದ ಚಪ್ ಚಪ್ ಸಪ್ಪಳವನ್ನು ಕೇಳಿ ಒಮ್ಮಲೇ ನಿನ್ನ ಯೋಚನೆಯು ತುಂಡರಿಸುತ್ತದೆ. ಒಂದು ಕ್ಷಣ ಕತ್ತಲೆಯಿಂದ ಈಚೆಗೆ ಈ ಕಾಡು ಪ್ರಾಣಿಯಂತಿರುವ ಆಕಾರವು ಹೊರಬರುತ್ತದೆ, ಮಳೆಯು ಆತನ ತಲೆಗೂದಲಿನಿಂದ ಪ್ರವಹಿಸುತ್ತದೆ, ಆತನ ಉದ್ದನೆಯ ಕಾಲುಗಳು ಎಳೆದು ಹಾಕುತ್ತಿವೆ. ಆತನು ನಿನ್ನನ್ನು ದಾಟಿಕೊಂಡು ಹೋಗುತ್ತಾನೆ. ಕತ್ತಲೆಯಲ್ಲಿ ಕಾಣದಂತೆ ಮರೆಯಾಗಿ ಹೋಗುತ್ತಾನೆ - ಮತ್ತು ನಿನ್ನನ್ನು ನಿನ್ನ ಉತ್ತಮವಾದ ಗಂಡು ಕುದುರೆಗಳು ನಿನ್ನ ರಥವನ್ನು ತಳುತ್ತಾ ಇರುತ್ತವೆ!

ಆಹಾಬನ ಮನಸ್ಸಿನಲ್ಲಿ ಇವೆಲ್ಲವುಗಳು ಇದ್ದವೆಂದು ನೀನು ಊಹಿಸಿ ಕೊಳ್ಳಬಹುದು!

ಎಲೀಯನು ಇಜ್ರೇಲಿನ ಬಾಗಿಲಿನ ಬಳಿಗೆ ಹೋಗಿ ಮುಂದೇನು ಸಂಭವಿಸುತ್ತದೆ ಎಂಬುದನ್ನು ನೋಡಲು ನಿಂತುಕೊಂಡನು. ಆತನು ನಿಶ್ಚಯವಾಗಿ ದೇಶವು ಆತನೆಡೆಗೆ ತಿರುಗಿಕೊಳ್ಳುವುದೆಂದು ನಂಬುವುದಕ್ಕೆ ಪ್ರತಿಯೊಂದು ಕಾರಣಗಳು ಇದ್ದವು. ಅದ್ಭುತನಾದ ದೇವರ ಶಕ್ತಿಯ ಮೂಲಕ ಆತನು ಬಾಳನ ಆರಾಧನೆಯನ್ನು ಮುರಿದಿದ್ದನು.

ಈ ಕಥೆಯು ನಮಗೇನು ಕಲಿಸುತ್ತದೆ? ಯಾಕೋಬನು ಈ ಘಟನೆಯು ಪ್ರಾರ್ಥನೆಯಲ್ಲಿ ಒಂದು *ಶಕ್ತಿಯು* ಉಂಟು, ಅದು ದೇವರು ಪ್ರಾರ್ಥನೆಗೆ ಉತ್ತರಿಸುವವನಾಗಿರುವನು ಎಂದು ಕೂಡಾ ಅದು ಕಲಿಸುವುದಾಗಿದೆ ಎಂದು ಹೇಳುತ್ತಾನೆ: “ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು *ಬಹು* ಬಲವಾಗಿದೆ” (ಯಾಕೋಬ 5:16ಬಿ; ಒತ್ತಿ ಹೇಳದ ನನ್ನದು). ಈ ಮೂರು ಶಕ್ತಿಯುತವಾದ ಮಾತುಗಳನ್ನು ಗಮನಿಸಿರಿ: ಪ್ರಾರ್ಥನೆಯು “ಅತ್ಯಾಸಕ್ತಿ” ಉಳ್ಳದ್ದಾಗಿರಬೇಕು; ಪ್ರಾರ್ಥನೆಯು ಯಾವುದನ್ನಾದರೂ “ಸಾಧಿಸು ವುದಾಗಿರುತ್ತದೆ” ಪ್ರಾರ್ಥನೆಯು “ಹೆಚ್ಚಿನದನ್ನು” ಸಾಧಿಸುವಂತದ್ದಾಗಿರುತ್ತದೆ. ಯಾಕೋಬನು ಪ್ರಾರ್ಥನೆಯ ಬಲದ ಪುರಾವೆಯನ್ನು ಮುಂದಿನ ಎರಡು ವಚನಗಳಲ್ಲಿ ಕೊಡುತ್ತಾನೆ:

> ಎಲೀಯನು ನಮ್ಮಂತ ಸ್ವಭಾವವುಳ್ಳವನಾಗಿದ್ದನು. ಅವನು ಮಳೆ ಬರಬಾರದೆಂದು

> ಬಹಳವಾಗಿ ಪ್ರಾರ್ಥಿಸಲು ಮೂರು ವರ್ಷ ಆರು ತಿಂಗಳುಗಳವರೆಗೆ ಮಳೆಯು ಬೀಳಲಿಲ್ಲ. ತಿರುಗಿ ಅವನು ಪ್ರಾರ್ಥನೆ ಮಾಡಲು ಆಕಾಶವು ಮಳೆಗರೆಯಿತು, ಭೂಮಿಯು ಬೆಳೆಯಿತು (ಯಾಕೋಬ 5:17, 18).

ದೇವರು ಎಲೀಯನ ಪ್ರಾರ್ಥನೆಗೆ ಉತ್ತರಿಸಿದನು, ಮತ್ತು (ಸೂಚ್ಯಾರ್ಥದಿಂದ) ನಿನ್ನ ಮತ್ತು ಮಕ್ಕಳಿಗೂ ಕಲಿಸುವದು ಅವಶ್ಯವಿದೆ.

ಪ್ರಾರ್ಥನೆಯು ಕ್ರಮವನ್ನು ಪ್ರಾರಂಭಿಸುವುದಾಗಿದೆ ಎಂಬುದನ್ನು ಪೋಷಕರಿಗೆ ಬಲವಾಗಿ ಶಿಫಾರಸ್ಸು ಮಾಡುವ ಬಗೆಯನ್ನು ಒಬ್ಬನು ತನ್ನ ಮಕ್ಕಳಿಗೆ ಕಲಿಸಲು ಬಯಸಿದನು. ಆತನ ಮೊದಲ ಮಗುವು ಜನಿಸಿದಾಗ ಆತನು ಮತ್ತು ಆತನ ಹೆಂಡತಿಯು ಒಂದು ಚಿಕ್ಕ ನೋಟು ಪುಸ್ತಕವನ್ನು ತಂದರು. ಪ್ರತಿ ಪುಟದ ಒಂದು ಬದಿಯಲ್ಲಿ ಅವರು ಹೀಗೆ ಬರೆದರು "ನಾವು ಕೇಳಿದೆವು" ಮತ್ತು "ಇನ್ನೊಂದೆಡೆ" "ಆತನು ಉತ್ತರಿಸಿದನು" ಎಂದು ಬರೆದರು. ಅವರು ತಮ್ಮ ಮಕ್ಕಳೊಂದಿಗಿನ ಧ್ಯಾನದ ಸಮಯದ ಆರಂಭದಲ್ಲಿ ವರ್ಷದುದ್ದಕ್ಕೂ ಅವರು ಪ್ರಾರ್ಥನಾ ಮನವಿಯ ಕೆಳಗೆ "ನಾವು ಕೇಳಿದೆವು" ಎಂದು ಬರೆದರು. ಅವರು ತಮ್ಮ ಪ್ರಾರ್ಥನೆಗೆ "ಹೌದು," "ಇಲ್ಲ," ಅಥವಾ "ಸ್ವಲ್ಪ ತಾಳು" ಎಂಬ ಉತ್ತರವನ್ನು ಕೊಡುವವನಾಗಿರುತ್ತಾನೆ ಎಂದು ತಮ್ಮ ಮಕ್ಕಳಿಗೆ ಒತ್ತಿ ಹೇಳುತ್ತಿದ್ದರು.

ಇದು ಯಾವಗಲೂ ಉದ್ರೇಕಿಸುವಂತದ್ದಾಗಿರುತ್ತದೆ, ಈ ಪ್ರಕರಣದಲ್ಲಿ ಎಲೀಯನು ದೇವರು ಅವನ ಪ್ರಶ್ನೆಗೆ ಉತ್ತರಿಸಿದಾಗ ಸ್ಪಷ್ಟವಾಗಿ "ಹೌದು" ಎಂದು ಉತ್ತರಿಸಿದನು. ಈ ನೋಟು ಪುಸ್ತಕ ಇಟ್ಟುಕೊಂಡ ಮನುಷ್ಯನು "ಹೌದು" ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಟ್ಟನು. ಒಬ್ಬ ತಂದೆಯು ತನ್ನ ನಷ್ಟದಲ್ಲಿದ್ದ ತನ್ನ ವ್ಯವಹಾರದವನ್ನೆಲ್ಲಾ ಮಾರಿ ಕರ್ತನಿಗಾಗಿ ಪೂರ್ಣ ಸಮಯದ ಸೇವೆಯನ್ನು ಮಾಡಿದನು. ಆರ್ಥಿಕವಾಗಿ ಸಂತಿಗಳು ಕಷ್ಟಮಯವಾದವು. ಒಂದು ಸಾರಿ ಕುಟುಂಬದ ಧ್ಯಾನದ ಸಮಯದಲ್ಲಿ, ಟಿಮ್ಮಿ, ನಾಲ್ಕು ಮಕ್ಕಳಲ್ಲಿ ಚಿಕ್ಕವನು "ಡ್ಯಾಡಿ, ಒಂದು ವೇಳೆ ನಾನು ದೇವರಿಗೆ ಒಂದು ಶರ್ಟನ್ನು ಕೇಳಿದರೆ ಆತನು ಅದನ್ನು ಒಪ್ಪುವನು ಎಂದು ನಿನಗೆ ಅನ್ನಿಸುತ್ತದೋ" ಎಂದು ಕೇಳಿದನು.

ಆಗ ತಂದೆ "ಯಾಕಿಲ್ಲ" ಎಂದು ಉತ್ತರಿಸಿದನು.

ಅವರು ತಮ್ಮ ಪ್ರಾರ್ಥನಾ ಚಿನ್ನಹದ ಪುಸ್ತಕದಲ್ಲಿ: "ಟಿಮ್ಮಿಗಾಗಿ ಶರ್ಟ ಪ್ರಾಯೋಗಿಕವಾಗಿ ತಾಯಿ" ಗಾತ್ರ 7 ಎಂದು ಸೇರಿಸಿದಳು. ಪ್ರತಿದಿನ ಟಿಮ್ಮಿ ಅವರು ಆ ಶರ್ಟಗಾಗಿ ಪ್ರಾರ್ಥಿಸುತ್ತಿದ್ದಾರೋ ಇಲ್ಲವೋ ಎಂದು ಖಚಿತಪಡಿಸಿಕೊಳ್ಳುತ್ತಿದ್ದನು. ಅವರು ಅದಕ್ಕಾಗಿ ವಾರಗಳವರೆಗೆ ಪ್ರತಿರಾತ್ರಿಯೆಲ್ಲಾ ಪ್ರಾರ್ಥಿಸುತ್ತಿದ್ದರು.

ಒಂದು ದಿನ ತಾಯಿಗೆ ಒಬ್ಬ ಕ್ರೈಸ್ತ ವ್ಯಾಪಾರಿಯೊಬ್ಬನ ಫೋನ್ ಕರೆಯೊಂದು ಬಂತು. ಆತನು ಡಲ್ಲಾಸನಲ್ಲಿ ಒಂದು ಅಂಗಡಿಯನ್ನು ಹೊಂದಿರುವುದಾಗಿ ಹೇಳಿದನು. ಆತನು, "ನಾನು ಈಗ ತಾನೇ ಜೂಲೈದ ಮುಕ್ತಾಯದ ಮಾರಾಟವನ್ನು ಮುಗಿಸಿದೆ. ನಿಮಗೆ ನಾಲ್ಕು ಗಂಡು ಮಕ್ಕಳಿದ್ದಾರೆಂದು ತಿಳಿದು ಬಂತು, ನೀವು ಉಪಯೋಗಿಸುವಂತಹ ಕೆಲವು ನನ್ನ ಹತ್ತಿರ ಇವೆ ಎಂದು ನನಗೆ ಅನ್ನಿಸುತ್ತದೆ. ನೀವು ಕೆಲ ಹುಡುಗರ ಶರ್ಟಗಳನ್ನು ಬಳಸುತ್ತಿರಾ" ಎಂದು ಕೇಳಿದನು.

ಆಗ ಆ ತಾಯಿ "ಯಾವ ಸೈಜನಿದು" ಎಂದು ಕೇಳಿದಳು.

"ಸೈಜ 7."

"ನಿಮ್ಮಲ್ಲಿ ಎಷ್ಟಿವೆ?"

ಆ ವ್ಯಾಪಾರಸ್ಥನು "ನನ್ನ ಹತ್ತಿರ ಹನ್ನೆರಡು ಇವೆ" ಎಂದು ಉತ್ತರಿಸಿದನು.

ಆ ರಾತ್ರಿ ಟಿಮ್ಮಿ ವಾಡಿಕೆಯಂತೆ "ಮರೆಯದೆ ಶರ್ಟಗಾಗಿ ಪ್ರಾರ್ಥಿಸಿರಿ" ಎಂದನು. ತಾಯಿಯು ಆ ಪುಸ್ತಕವನ್ನು ತೆರೆದಳು ನಕ್ಕು ಬರೆದಳು "ಹೌದು" ನಂತರ ಹೇಳಿದಳು "ಇನ್ನು

ಮುಂದೆ ನಾವು ಶರ್ಟಗಾಗಿ ಪ್ರಾರ್ಥಿಸುವುದು ಬೇಡ ಟಿಮ್ಮಿ, ದೇವರು ಉತ್ತರಿಸಿದ್ದಾನೆ."

"ಆತನು ಉತ್ತರಿಸಿದ್ದಾನೆಯೇ?"

"ಹೌದು."

ಆ ಸಹೋದರಲ್ಲಿ ಒಬ್ಬನು ಹೋದನು ಮತ್ತು ಶರ್ಟನ್ನು ತಂದು ಮೇಜಿನ ಮೇಲಿಟ್ಟನು. ಟಿಮ್ಮಿಯ ಕಣ್ಣುಗಳು ದೊಡ್ಡದಾದವು. ಸಹೋದರನು ಹೋಗಿ ಇನ್ನೊಂದು ಶರ್ಟನ್ನು ತಂದನು. ಆತನು ಹೊರಗೆ ಹೋದನು ಮತ್ತು ಬಂದನು, ಹೋದನು ಮತ್ತು ಬದನು, ಹನ್ನೆರಡು ಶರ್ಟಗಳು ಮೇಜಿನ ಮೇಲೆ ಪೇರಿಸಿಡುವ ತನಕ ಹಾಗೆಯೇ ಮಾಡಿದನು. ಟಿಮ್ಮಿಯು ದೇವರು ಶರ್ಟಗಳ ವ್ಯವಹಾರಕ್ಕಾಗಿ ಇಳಿದಿದ್ದಾನೆನೋ ಎಂದು ಯೋಚಿಸಿದನು. ಆ ಚಿಕ್ಕ ಬಾಲಕನ ಕೊರತೆಗಳ ಬಗೆಗೆ ಕಾಳಜಿ ಇಲ್ಲದ ದೇವರು ಪರಲೋಕದಲ್ಲಿ ಇಲ್ಲ.

ದೇವರು ನಮ್ಮ ಪ್ರಾರ್ಥನೆಗಳಿಗೆ ಯಾವಾಗಲೂ "ಹೌದು" ಎಂದು ಹೇಳುವದಿಲ್ಲ. ಎಲೀಯನ ಮುಂದಿನ ದಾಖಲಿತ ಪ್ರಾರ್ಥನೆಯು "ಇಲ್ಲ" ಎಂದು ಉತ್ತರವನ್ನು ಹೊಂದಿತ್ತು. "ಇಲ್ಲ" ಎಂದು ಉತ್ತರವು "ಹೌದು" ಎಂಬ ಉತ್ತರಕ್ಕಿಂತ ಹೆಚ್ಚಾಗಿ ಬರುವಂತದ್ದಾಗಿದೆ ಎಂಬುದನ್ನು ನಾವು ಕಲಿಯುವದು ಮಹತ್ವವಾಗಿದೆ. ಹಾಗೆಯೇ ನಮ್ಮ ಮಕ್ಕಳೂ ಕೂಡಾ. ಪ್ರಾರ್ಥನಾ ನೋಟ್ ಪುಸ್ತಕವನ್ನು ಶಿಫಾರಸ್ಸು ಮಾಡಿದ ಮನುಷ್ಯನು ಕೂಡಾ ದೇವರು "ಇಲ್ಲ" ಎಂದು ಉತ್ತರಿಸುವ ದೃಷ್ಟಾಂತಗಳನ್ನು ಹೊಂದಿದ್ದಾನೆ. ಆತನು ಆತನ ಪತ್ನಿಯು ಹೆಚ್ಚಿನ ಮಕ್ಕಳಿಗಾಗಿ ಪ್ರಾರ್ಥಿಸಿದರು. ದೇವರು ಆ ಪ್ರಾರ್ಥನೆಗೆ ಉತ್ತರವನ್ನು ಅವರ ಹುಟ್ಟಿನ ಸಮಯದಲ್ಲಿಯೇ ಪ್ರಕಟಿಸಿದ್ದನು. ಅವರಿಗೆ ಸತ್ತಮಗುವೇ ಹುಟ್ಟಿತ್ತು. ತಂದೆಯು ಮನೆಗೆ ಬಂದಾಗ ಆತನ ನಾಲ್ಕು ಮಕ್ಕಳು ಬಾಗಿಲ ಬಳಿಯಲ್ಲಿಯೇ ಇದ್ದರು. "ಡ್ಯಾಡಿ, ಯಾವ ಮಗುವು ಹುಟ್ಟಿತ್ತು. ಹುಡುಗನೋ ಹುಡುಗಿಯೋ?" ಆತನು ಅವರನ್ನು ಕರೆದುಕೊಂಡು ಹಾಸಿಗೆಯ ಹತ್ತಿರ ಕರೆದೊಯ್ದನು, ಚಿಕ್ಕಪುಸ್ತಕವನ್ನು ತೆಗೆದುಕೊಂಡನು, ಅದನ್ನು ತೆರೆದನು, ಮತ್ತು ಬರೆದನು "ಇಲ್ಲ" ನಂತರ ಆತನು ಹೀಗೆ ಟಿಪ್ಪಣಿ ಮಾಡುತ್ತಾನೆ. "ನೀವು ಇಂಥ ಒಂದು ಅನುಭವವನ್ನು ಹಂಚಿಕೊಂಡಿದ್ದಾದರೆ ಅದು ಪ್ರಾರ್ಥನೆಯ ಕುರಿತು ನಾವು ಮಾಡಬಹುದಾದ ಇಪ್ಪತ್ತು ಡಜಾನ್ ಪ್ರಾರ್ಥನಾ ಪ್ರಸಂಗಗಳಿಗಿಂತ ಮಿಗಿಲಾಗಿದ್ದಾಗಿರುತ್ತದೆ."

## ಉತ್ತರಿಸಿದ ಪ್ರಶ್ನೆಗಳ ರಹಸ್ಯ

ಎಲೀಯನ ಪ್ರಾರ್ಥನೆಯು *ಯಾಕೆ* ಉತ್ತರಿಸಲ್ಪಟ್ಟಿತು ಎಂಬ ವಿಷಯಕ್ಕೆ ಬರೋಣ: ನಮ್ಮ ವಿಷಯವು "ಉತ್ತರಿಸಿದ ಪ್ರಶ್ನೆಗಳ ರಹಸ್ಯ" ಎಂದಾಗಿದೆ. "ಕ್ರಮೇಣವಾಗಿ" ನಾವು ಒಂದು ಸಂಗತಿಯಲ್ಲಿ ಕೇಂದ್ರಿಕರಿಸೋಣ. ಇದನ್ನು ಮಾಡುವ ಮೊದಲು ಬಲಯುತವಾದ ಪ್ರಾರ್ಥನೆಯನ್ನು ಮಾಡುತ್ತಿದ್ದ ಈ ಮನುಷ್ಯನ ಗುಣಲಕ್ಷಣಗಳನ್ನು ನೋಡೋಣ:

ಮೊದಲು ಆತನು ನಂಬಿಕೆಯ ಮನುಷ್ಯನಾಗಿದ್ದನು. ಯಾಕೋಬನು "ನಂಬಿಕೆಯಿಂದ ಕೇಳಿರಿ" (ಯಾಕೋಬ 1:6) ಎಂದು ಹೇಳುತ್ತಾನೆ. ದೇವರು ಮಳೆಯ ವಾಗ್ದಾನವನ್ನು ಮಾಡಿದನು ಮತ್ತು ಎಲೀಯನ ಮನದಲ್ಲಿ ಯಾವ ಸಂಶಯವೂ ಇರಲಿಲ್ಲ. ಆತನು "ಅಲ್ಲಿ ದೊಡ್ಡ ಮಳೆಯಾಗುವ ಸದ್ದು ಕೇಳಿಬರುತ್ತದೆ" (ವಚನ 41) ಎಂದು ಹೇಳಲು ಸಮರ್ಥನಾದನು. ಇದು ನಮಗೆ ಲಾಜರನನ್ನು ಎಬ್ಬಿಸುವ ಮುಂಚೆ ಯೇಸು ಮಾಡಿದಂತಹ ಪ್ರಾರ್ಥನೆಯಾದ "ತಂದೆಯೇ ನೀನು ನನ್ನ ಪ್ರಾರ್ಥನೆಯನ್ನು ಕೇಳಿದ್ದಕ್ಕಾಗಿ ನಿನ್ನನ್ನು ಕೊಂಡಾಡುತ್ತೇನೆ" (ಯೋಹಾನ 11:41) ಎಂಬುದನ್ನು ನಮಗೆ ನೆಪಿಸುತ್ತದೆ.

ಎರಡನೆಯದಾಗಿ, ಆತನು ದೇವರ ಮೇಲೆ ಆತುಕೊಳ್ಳುವವನಾಗಿದ್ದನು. ಇದರ ಬಗೆಗೆ ಯೋಚಿಸಿರಿ: ದೇವರು ಮಳೆಗಾಗಿ ವಾಗ್ದಾನಮಾಡಿದ್ದನು. ನಂಬಿಕೆಯ ಕಿವಿಗಳಿಂದ, ಎಲೀಯನು ಮಳೆಯ ಸದ್ದನ್ನು ಕೇಳಿದನು. ನಂತರ ಎಲೀಯನಿಗೆ ಪ್ರಾರ್ಥಿಸುವುದು ಏಕೆ ಅವಶ್ಯವಿತ್ತು? ನಮಗೆ ಕಾರಣಗಳಿರಬಹುದು, "ಏನು ಊಟಮಾಡಬೇಕು, ಏನು ಕುಡಿಯಬೇಕು ... ಎಂದು

ಚಿಂತೆ ಮಾಡಬೇಡಿರಿ ... ಇದು ನಿಮಗೆ ಬೇಕಾಗಿದೆ ಎಂದು ಪರಲೋಕದಲ್ಲಿರುವ ನಿಮ್ಮ ತಂದೆಗೆ ತಿಳಿದಿದೆಯಷ್ಟೇ" (ಮತ್ತಾಯ 6:33). ಅಥವಾ "ನಾವು ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ದೇವರು ನಮ್ಮ ಪಾಪಗಳನ್ನು ಕ್ಷಮಿಸುವುದಾಗಿ ವಾಗ್ದಾನ ಮಾಡಿದ್ದರಿಂದಾಗಿ ನಾವು ಕ್ಷಮಾಪಣೆಗಾಗಿ ಪ್ರಾರ್ಥಿಸುವದು ಏಕೆ?" ಅದಕ್ಕೆ ಉತ್ತರವು ದೇವರು ಆತನು ಪ್ರಾರ್ಥಿಸುವುನ್ನು ಬಯಸುವವವನಾಗಿದ್ದಾನೆ - ಆತನ ಮೇಲೆ ಪ್ರಭಾವ ಬೀರಲು, ಮಳೆಯು ಆಕಾಶದ ಆಶೀರ್ವಾದವಾಗಿದೆ ಮತ್ತು ಎಲೀಯನು ಆ ಯೋಜನೆಯಲ್ಲಿ ಹೊಂದಿಕೊಳ್ಳುವ ತರದ ವ್ಯಕ್ತಿಯಾಗಿದ್ದಾನೆ ಎಂಬುದಕ್ಕಾಗಿಯೇ. ಅಷ್ಟೆ ಅಲ್ಲ ಇದು ನಮ್ಮ ಮನಸ್ಸಿನ ಮೇಲೆಯೂ ಕೂಡಾ ಪ್ರಭಾವವನ್ನು ಬೀರುವುದನ್ನು ಎಲ್ಲಾ ಆಶೀರ್ವಾದಗಳು ಆತನಿಂದ ಬಂದವುಗಳು, ನಾವು ಆತನ ಮೇಲೆ ಆತುಕೊಳ್ಳಲೇಬೇಕು ಎಂಬುದಾಗಿ ದೇವರು ನಮ್ಮ ಮನಸ್ಸುಗಳ ಮೇಲೆ ಪ್ರಭಾವ ಬೀರಲು ಯತ್ನಿಸುತ್ತಾನೆ ...

ಬೈಬಲ್ಲಿನಲ್ಲಿನ ಕೊನೆಯ ಹಾಳೆಯಲ್ಲಿ ಬರೆಯುವಂತಹದಕ್ಕೆ ಯೋಗ್ಯವಾದ ಮಾತುಗಳು ಇಲ್ಲಿವೆ: "ನಾನು ಪ್ರಯತ್ನಿಸಿದೆ, ನಾನು ಸೋತೆ. ನಾನು ನಂಬಿದೆ, ಆತನು ಜಯಶಾಲಿಯಾದನು."

ಮೂರನೆಯದಾಗಿ, ದೇವರೊಡನೆ ಮಾತನಾಡುವುದಕ್ಕಾಗಿ ಸಮಯವನ್ನು ತೆಗೆದು ಕೊಳ್ಳುವಂತವನಾಗಿದ್ದಾನೆ. ಅದೊಂದು ಬಲು ಬಿರುಸಿನ ದಿನವಾಗಿತ್ತು, ಆದರೆ ಎಲೀಯನು ದೇವರೊಡನೆ ಮಾತನಾಡಲು ಸಮಯವನ್ನು ಮಾಡಿಕೊಂಡನು. ಮಾರ್ಕ ಮೊದಲನೆಯ ಅಧ್ಯಾಯವನ್ನು ಗಮನಕ್ಕೆ ತಂದುಕೊಳ್ಳಿರಿ. ಕೇವಲ ಐವತ್ತೆರಡು ದಿನಗಳು ಕರ್ತನ ಜೀವನದಲ್ಲಿ ದಾಖಲಿಸಲ್ಪಟ್ಟಿದೆ ಮತ್ತು ಮಾರ್ಕ 1 ಅವುಗಳಲ್ಲಿ ಅತೀ ಬಿರುಸಿನಿಂದ ಕೂಡಿದುದನ್ನು ದಾಖಲಿಸಿದೆ. ಆ ದಿನವು ಕಲಿಸುವಿಕೆಯಿಂದ, ಬೋಧನೆಯಿಂದ, ವಾಸಿ ಮಾಡುವಿಕೆಯಿಂದ ಮತ್ತು ಇತರ ಅದ್ಭುತಗಳಿಂದ ತುಂಬಿದ ದಿನ ಅದಾಗಿತ್ತು. ಈ ಮುಂದಿನ 35 ನೇಯ ವಚನವನ್ನು ಗಮನಿಸಿರಿ. "ಮುಂಜಾನೆ ಇನ್ನೂ ಮೊಬ್ಬಿರುವಾಗಲೇ ಆತನು ಎದ್ದು ಹೊರಟು ಅಡವಿಯ ಸ್ಥಳಕ್ಕೆ ಹೋಗಿ ದೇವರನ್ನು ಪ್ರಾರ್ಥಿಸುತ್ತಿದ್ದನು." ಯೇಸುವಿಗೆ ಸಾಕಾಗಿಬಿಟ್ಟಿತ್ತು ಆದರೂ ಆತನು ಪ್ರಾರ್ಥನೆಗಾಗಿ ಸಮಯವನ್ನು ಮಾಡಿಕೊಂಡನು.

ನಾವು ಪ್ರಾರ್ಥನೆಗಾಗಿ ಸಮಯವನ್ನು ಮಾಡಿಕೊಳ್ಳಲೇಬೇಕು. ದೊಡ್ಡ ಕುಟುಂಬದೊಂದಿಗಿನ ಒಬ್ಬ ತಾಯಿಯು ಕೆಲವು ಕ್ಷಣಗಳವರೆಗೆ ಎಲ್ಲರಿಂದ ದೂರವಾಗಿ ದೇವರೊಂದಿಗಿರಬೇಕು ಎಂದು ಅನಿಸಿದಾಗ ಅವಳು ತನ್ನ "ಏಕಾಂತವಾದ ಪ್ರಾರ್ಥನೆಗೆ" ಏಕಾಂತದಲ್ಲಿ ನಡೆಯುವುದನ್ನು ರೂಢಿಸಿಕೊಂಡಿದ್ದಳು.

ನಾಲ್ಕನೆಯದಾಗಿ, ಆತನು ವಿನಮ್ರತೆಯ ಮನುಷ್ಯನಾಗಿದ್ದನು. ಬೆಂಕಿಯನ್ನು ಆಕಾಶದಿಂದ ಕೆಳಗೆ ಕರೆದಂತಹ ಮನುಷ್ಯನು ಈತನು, ಸಾವಿರಾರು ಜನರನ್ನು ಹಿಂದೆಮುಂದೆ ಆಡಿಸಿದವನು, ಆದರೆ ಗರ್ವದ ಯಾವ ಚಿಹ್ನೆಯೂ ಆತನಲ್ಲಿ ಇರಲಿಲ್ಲ. ಬದಲಾಗಿ ಆತನು ಮೊಣಕಾಲುಗಳ ಮೇಲೆ ತಲೆಯನ್ನಿಟ್ಟು ಬೊಗ್ಗಿದಂತಹ ಸ್ವಭಾವವು ಸೃಷ್ಟಿಕರ್ತನಾದ ದೇವರ ಮುಂದೆ ವಿನಮ್ರತೆಯನ್ನು ಸೂಚಿಸುವುದಾಗಿದೆ. "ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ" (ಯಾಕೋಬ 4:6). ಕೀರ್ತನೆಗಾರನು "ಯೆಹೋವನೇ ನೀನು ದೀನರ ಕೊರತೆಯನ್ನು ನೀಗಿಸುವವನಾಗಿದ್ದೀ" (ಕೀರ್ತನೆ 10:17) ಎಂದು ಬರೆದಿದ್ದಾನೆ.

ಆತನು ಇತರರ ಬಗೆಗೆ ಯೋಚಿಸುವ ಮನುಷ್ಯನಾಗಿದ್ದನು ಆತನು ನಿಸ್ವಾರ್ಥಿಯಾಗಿದ್ದನು. ಆತನು ತನಗಾಗಿ ಪ್ರಾರ್ಥಿಸಲಿಲ್ಲ, ಆದರೆ ಕಷ್ಟಪಡುತ್ತಿರುವ ಭೂಮಿಯ ಬಗೆಗೆ ಪ್ರಾರ್ಥಿಸುವವನಾಗಿದ್ದಾನೆ. ಆತನು ತನ್ನ ಬೆಳಗಾಗಿ, ತನ್ನ ಪ್ರಾಣಿಗಳಿಗಾಗಿ, ತನ್ನ ಕುಟುಂಬಕ್ಕಾಗಿ ಪ್ರಾರ್ಥಿಸಲಿಲ್ಲ ಆದರೆ ಆತನು ಇತರರ ಬೆಳಗಾಗಿ, ಇತರರ ಪ್ರಾಣಿಗಳಿಗಾಗಿ, ಇತರರ ಕುಟುಂಬಕ್ಕಾಗಿ ಪ್ರಾರ್ಥಿಸಿದನು. ಯಾಕೋಬನು "ನೀವು ಏನನ್ನು ಬೇಡಿದರೂ

ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ ಉಪಯೋಗಿಸ ಬೇಕೆಂಬ ದುರಭಿಪ್ರಾಯಪಟ್ಟು ಬೇಡಿ ಕೊಳ್ಳುವುದರಿಂದ ನಿಮಗೆ ದೊರೆಯುವುದಿಲ್ಲ" (ಯಾಕೋಬ 4:3) ಎಂದು ಹೇಳುತ್ತಾನೆ.

ಆರನೆಯದಾಗಿ, ಈತನು ಪ್ರಾರ್ಥನೆಯಲ್ಲಿ ಅತ್ಯಾಸಕ್ತಿಯುಳ್ಳವನಾಗಿದ್ದನು. "ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹುಬಲವಾಗಿದೆ" ಎಂದು KJV ಭಾಷಾಂತರದಲ್ಲಿ (ಯಾಕೋಬ 5:16) ನೋಡುತ್ತೇವೆ. ಇದರ ಅಕ್ಷರಶಃ ಗ್ರೀಕ್ ಅರ್ಥವು "ಆತನು *ಪ್ರಾರ್ಥನಾಪೂರಕವಾಗಿ* ಪ್ರಾರ್ಥಿಸಿದನು" (5:17; ಒತ್ತಿ ಹೇಳಿದ್ದು ನನ್ನದು) ಎಂದು ಇದು ಹೆಬ್ರಿಸಮ ಆಗಿದ್ದು ಆ ಪದದ ತೀವ್ರತೆಯನ್ನು ಸೂಚಿಸುವುದಾಗಿದೆ. ನಾವು ಪ್ರಾರ್ಥನೆಯನ್ನು ಪದಗಳೊಡನೆ, ಪದಗುಚ್ಛಗಳೊಡನೆ, ವಿಧಿವತ್ತಾಗಿ ಮಾಡುತ್ತೇವೆ. ಎಲೀಯನು "ಪ್ರಾರ್ಥನೆಯನ್ನು ಪ್ರಾರ್ಥನಾ ಪೂರಕವಾಗಿ" ಮಾಡಿದನು. ಆತನು ನಿಜವಾಗಿಯೂ ಪ್ರಾರ್ಥಿಸಿದನು! ಪೌಲನು ಅದೇ ತೆರನಾದ ವಿವರಣೆಯನ್ನು ಉಪಯೋಗಿಸುತ್ತಾನೆ ಎಫೆಸ 6:18 "ಸಕಲ ವಿಧವಾದ ಪ್ರಾರ್ಥನೆಯಿಂದಲೂ ... ಪ್ರಾರ್ಥಿಸಿರಿ."

ಏಳನೆಯದಾಗಿ ಆತನು ನಿರಂತರವಾಗಿ ಪ್ರಾರ್ಥಿಸುವವನಾಗಿದ್ದನು. ಮಳೆಯು ಬರಲೆಂದು ಎಲೀಯನು ಏಳು ಸಾರಿ ಪ್ರಾರ್ಥಿಸಿದನು. ಇದಕ್ಕೂ ಮೊದಲೇ ಆತನು ಕೇವಲ ಮೂರು ಸಾರಿ ಪ್ರಾರ್ಥಿಸುತ್ತಿದ್ದನು, ಆತನು ಒಂದೇ ಸಾರಿ ಪ್ರಾರ್ಥಿಸಿದನು. ಆಗ ಬಾಲಕನು ಮರಣದಿಂದ ಎದ್ದನು. ಬೆಂಕಿಯು ಆಕಾಶದಿಂದ ಬಂತು. ಈ ಸಂದರ್ಭದಲ್ಲಿ, ಆತನು ಒಂದು ಸಾರಿ ಪ್ರಾರ್ಥಿಸಿದನು ಆದರೆ ಏನೂ ಸಂಭವಿಸಲಿಲ್ಲ. ಆತನು ಮೂರು ಸಾರಿ ಪ್ರಾರ್ಥಿಸಿದನು. ಒಬ್ಬನನ್ನು ಮರಣದಿಂದ ಎಬ್ಬಿಸಲು ತೆಗೆದುಕೊಂಡ ಸಂಖ್ಯೆಯು ಮೂರು ಆಗಿದೆ - ಮತ್ತು ಏನೂ ಸಂಭವಿಸಲಿಲ್ಲ! ನಾನು ನಿರಾಶನಾಗುತ್ತಿದ್ದೆನು; "ಈ ಸಾರಿ ದೇವರು 'ಇಲ್ಲ' ಎಂದು ಹೇಳುತ್ತಿರುವುದನ್ನು ನಾನು ಊಹಿಸುತ್ತೇನೆ." ಎಲೀಯನು, ನಿರಂತರವಾಗಿದ್ದನು, ಮತ್ತು ಆತನ ಅವರಿಗೆ ಸಾಮ್ಯದಿಂದ ಒಂದು ದೃಷ್ಟಾಂತವನ್ನು ಹೇಳಿದನು "ಬೇಸರಗೊಳ್ಳದೆ ಯಾವಾ ಗಲೂ ಪ್ರಾರ್ಥನೆ ಮಾಡುತ್ತಿರಬೇಕು" (ಲೂಕ 18:1). ಪೌಲನು ಹೀಗೆ ಹೇಳುತ್ತಾನೆ ಪ್ರಾರ್ಥನೆಯನ್ನು ತಪ್ಪದೆ ಮಾಡಲಿ? ಎಂದು ಹೇಳುತ್ತಾನೆ (ಕೊಲೊಸ್ಸೆ 4:2).

ಉತ್ತರಿಸಿದ ಪ್ರಾರ್ಥನೆಯ "ರಹಸ್ಯಗಳು" ನಾವು ಗಮನಿಸುವಂತೆ ಇವೆಲ್ಲವನ್ನೂ ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು.

"ರಹಸ್ಯಗಳು" ಇಂಗ್ಲೀಷಿನ ಮೂರುಗಳಲ್ಲಿ ಇರಲಿಲ್ಲ: ಉದ್ದಳತೆ ಭಾಷೆ ದೊಡ್ಡ ಧ್ವನಿ "ನಾನು ಪ್ರಾರ್ಥಿಸಲಾರೆನು" ಕೆಲವರು ಹೇಳುತ್ತಾರೆ. ನಾನು ಬಲು ಸಮಯದವರೆಗೆ ಪ್ರಾರ್ಥಿಸಲಾರೆನು; "ಅಲ್ಲಿ ಉಪಯೋಗಿಸಬಹುದಾದ ಪದಗಳು ನನಗೆ ತಿಳಿಯದು" ಅಥವಾ "ನಾನು ನಾಚಿಕೆಯ ಸ್ವಭಾವವುಳ್ಳವನು; ಒಂದು ವೇಳೆ ನಾನು ಪ್ರಾರ್ಥಿಸಿದರೆ ಜನರಿಗೆ ತಿಳಿಯಲಾರದು."

ಇವುಗಳಲ್ಲಿ ಯಾವ "ರಹಸ್ಯಗಳು" ಇಲ್ಲ. ಇದೆಲ್ಲ ಏನು? ಮತ್ತೊಂದಾವರ್ತಿ ಯಾಕೋಬನ ಹೇಳಿಕೆಯನ್ನು ಗಮನಿಸೋಣ "ನೀತಿವಂತಮ ಅತ್ಯಾಸಕ್ತಿಯ *ವಿಜ್ಞಾಪನೆಯ* ಬಹು ಬಲವಾಗಿದೆ" (ಯಾಕೋಬ 5:16ಬಿ; ಒತ್ತಿ ಹೇಳಿದ್ದು ನನ್ನದು). "ರಹಸ್ಯಗಳು" (ನಾನು ಈ ಪಾರಿಭಾಷೆಯನ್ನು ನಾಲಿಗೆಯ ಪರೀಕ್ಷೆಗಾಗಿ ಬಳಸುತ್ತೇನೆ) ನೀತಿವಂತ ಮನುಷ್ಯನವುಳಾಗಿವೆ. "ರಹಸ್ಯ" *ಇದು ದೇವರೊಂದಿಗಿನ ಸರಿಯಾದ ಸಂಬಂಧವೇ ಇದರ ರಹಸ್ಯವಾಗಿದೆ.*

ಒಪ್ಪಿಕೊಳ್ಳಬಹುದಾದ ಪ್ರಾರ್ಥನೆಯ ಅವಶ್ಯಕತೆಗಳನ್ನು ಅಭ್ಯಾಸಿಸುವದು ಒಳ್ಳೆಯ ದಾಗಿದೆ. ನಾವು ಈ ಮಹತ್ವದ ವಿಷಯದ ಕುರಿತು ಕಲಿಯಬೇಕಾದದ್ದು ಮಹತ್ವದ್ದಾಗಿದೆ, ಆದರೆ ಆಳವಾದ ಪ್ರಾರ್ಥನಾ ಜೀವನದ ಮೂಲವು ನಾವು ಯೋಗ್ಯರಾದ ಜನರು ಆಗಿರ ಬೇಕಾದುದ್ದು ಆಗಿದೆ. ನಾವು ನೀತಿವಂತರಾಗಿರುವದು ಅತೀ ಪ್ರಾಮುಖ್ಯ. ನಮ್ಮ ದೊಡ್ಡ ಅವಶ್ಯಕತೆಯು ಸರಿಯಾದುದನ್ನು ಪಡೆದುಕೊಳ್ಳುವದು ಮತ್ತು ದೇವರೊಂದಿಗೆ ಸರಿಯಾಗಿ

ನಡೆದುಕೊಳ್ಳುವದು ಆಗಿದೆ!

ಪ್ರಾರ್ಥನೆಯ ಮನುಷ್ಯನಾದ ಎಲೀಯನ ಬಗೆಗೆ ನಾವು ಯೋಚಿಸುವಾಗ ಮತ್ತು ವಿಶೇಷವಾಗಿ ಆತನ ಪ್ರಾರ್ಥನೆಯ ವಿಶೇಷವಾದ ಫಲಿತಾಂಶವನ್ನು ನೆನಪಿಸಿಕೊಳ್ಳುವಾಗ ನಾವು ಎಂದಿಗೂ ಅಂಥ ಪ್ರಾರ್ಥನಾ ಜೀವಿತವನ್ನು ನಡಿಸಲಿಕ್ಕಾಗದು ಎಂದು ಕೊಳ್ಳುತ್ತೇವೆ. ತಿರುಗಿ, ಯಾಕೋಬನು ಎಲೀಯನನ್ನು ಬಲಯುತವಾದ ಪ್ರಾರ್ಥನೆಯ ಮನುಷ್ಯನಂತಿದ್ದಾನೆ ಎಂದು ಆತನನ್ನು ಪರಿಚಯಿಸುವುದನ್ನು ಗಮನಿಸಿರಿ. ಯಾಕೋಬನು "ದೇವರ ಒಬ್ಬ ದೊಡ್ಡ ಪ್ರವಾದಿ" ಎಂದು ಹೇಳಲಿಲ್ಲ. ಅಥವಾ "ಎಲೀಯನ ಅದ್ಭುತ ಶಕ್ತಿಯ ಕೆಲಸಗಾರ" ಎಂದು ಹೇಳಲಿಲ್ಲ. ಬದಲಾಗಿ ಆತನು "ಎಲೀಯನು ನಮ್ಮಂಥ ಸ್ವಭಾವದ ಮನುಷ್ಯನು" ಎಂದು ಹೇಳುತ್ತಾನೆ (ಯಾಕೋಬ 5:17). ಒಂದು ವೇಳೆ ಎಲೀಯನು ಸ್ನಾನಮಾಡಿ ಮುಖಕ್ಷೌರಮಾಡಿ, ಕೂದಲನ್ನು ಕತ್ತರಿಸಿಕೊಂಡು ಮತ್ತು ಹೊಸ ಬಟ್ಟೆಧರಿಸಿ ಉದ್ಧನೆಯ ಒರಗುಬೆಂಚಿನಲ್ಲಿ ಕೂತಾಗ, ಆತನಿಗೆ ಎಲೀಯ ಎಂದು ಪರಿಚಯಿಸಿಕೊಳ್ಳಲು ನಾವು ಅಸಮರ್ಥರಾಗುತ್ತೇವೆ.

ಆತನ ಪ್ರಾರ್ಥನೆಗಳು ಯಾಕೆ ಉತ್ತರಿಸಲ್ಪಟ್ಟವು? ಯಾಕೆಂದರೆ ನಾವು ಹೊಂದಲಾರದ ಅಪೂರ್ವಗುಣಗಳನ್ನು ಆತನು ಹೊಂದಿಲ್ಲ. ಬದಲಾಗಿ ಆತನು, ಕರುಣೆಯುಳ್ಳ ಮನುಷ್ಯನಾಗಿದ್ದನು ಆಗಿದ್ದಾನೆ.

ಎಲೀಯನು ಹೀಗೆ ಹೇಳುತ್ತಾನೆ "ನಾನು ದೇವರ ಮುಂದೆ ನಿಂತಿದ್ದೇನೆ" (ನೋಡಿರಿ 1 ಅರಸು 17:1; 18:15). ಆತನು ಯಾವಾಗಲೂ ದೇವರ ಸನ್ನಿಧಾನದಲ್ಲಿ ಇದ್ದನು. ಆತನು ಪ್ರಾರ್ಥಿಸುವಾಗ ಇದು ಹಂತಗಳ ಮೂಲಕ ಯಶಸ್ವಿಯುತವಾದ ಪ್ರಾರ್ಥನಾ ಜೀವಿತಕ್ಕೆ ಅಥವಾ ಒಪ್ಪಿಕೊಳ್ಳುವಂತಹ ಪ್ರಾರ್ಥನೆಗಾಗಿನ ಹದಿನೈದು ಅವಶ್ಯಕತೆಗಳನ್ನು ದಾಟಿ ಹೋಗಬೇಕಿಲ್ಲ. ಬದಲಾಗಿ ಆತನು ಯಾವ ದೇವರಿಗೆ ಆತನು ತನ್ನನ್ನು ಸಮರ್ಪಿಸಿದ್ದನೋ ಆತನೊಡನೆ ಆತನು ಮಾತನಾಡುತ್ತಿದ್ದನು.

ದೇವರು ಆತನ ಪ್ರಾರ್ಥನೆಗೆ ಉತ್ತರಿಸಿದನು.

## ಮುಕ್ತಾಯ

ದೇವರೊಂದಿಗೆ ನಿಮ್ಮ ಸಂಬಂಧವು ಹೇಗಿದೆ? ನನ್ನದು ಹೇಗಿದೆ? ನಾವು ನಿಜವಾಗಿಯೂ ಪ್ರಾರ್ಥಿಸುತ್ತಿದ್ದೇವೆಯಾ? "ಪರಲೋಕದಲ್ಲಿರುವ ನಮ್ಮ ತಂದೆಯೇ"? (ಮತ್ತಾಯ 6:9) ಎಂಬುದಾಗಿ ಜನರು ಕರ್ತನ ಪ್ರಾರ್ಥನೆಯನ್ನು ಪುನರುಚ್ಛರಿಸುತ್ತಾರೆ ಮತ್ತು ಅದೇ ಪದಗಳನ್ನು ಹೇಳುವವರಾಗಿರುತ್ತಾರೆ, ಆದರೆ "... ನಮ್ಮ ತಂದೆಯೇ"? ಎಂದು ಅದನ್ನು ಹೇಳಲು ನಮಗೆ ಹಕ್ಕಿದೆಯಾ? ಒಂದು ವೇಳೆ ನಾವು ಪಶ್ಚಾತ್ತಾಪ ಪಟ್ಟ ವಿಶ್ವಾಸಿಗಳಂತೆ ದೀಕ್ಷಾಸ್ನಾನ ಹೊಂದದಿದ್ದರೆ, ನಾವು ದೇವರ, ಮಕ್ಕಳಾಗುವುದಕ್ಕೆ ಸಾಧ್ಯವಿಲ್ಲ ಎಂದು ಬೈಬಲ್ ನನಗೆ ಬೋಧಿಸುವುದಾಗಿರುತ್ತದೆ (ಯೋಹಾನ 3:3-5; ಗಲಾತ್ಯ 3:26, 27).

ಜನರು ಕೆಲಸಾರಿ "ಒಬ್ಬ ಕ್ರೈಸ್ತನು ಸಂಪೂರ್ಣವಾಗಿ ತನ್ನನ್ನು ಒಪ್ಪಿಸಿಕೊಡುವಂತೆ ಒಪ್ಪಿಸಿಕೊಡಲು ನನಗೆ ಮನಸ್ಸಿಲ್ಲ." ಅವರು ಅದನ್ನು ಹೇಳುವಾಗ ಅವರು ತಮ್ಮ ಆತ್ಮವನ್ನು ನಿತ್ಯತ್ವದ ಅಪಾಯಕ್ಕೆ ತಳ್ಳುವವರಾಗಿರುತ್ತಾರೆ. ಹೇಗೋ, ಅದರ ತಕ್ಷಣದ ಪರಿಣಾಮವು, ಅವರು ತಮ್ಮನ್ನು ತಾವು ದೇವರ ಸಾನಿಧ್ಯದಿಂದ ಕಡಿದುಕೊಳ್ಳುತ್ತಾರೆ. ಜಗತ್ತಿನಲ್ಲಿರುವ ಕಷ್ಟಗಳ ಬಗೆಗೆ ಯೋಚಿಸು. ಸಮಸ್ಯೆಗಳು ಬಂದಾಗ ದೇವರೆಡೆಗೆ ಹೋಗಲು ಅಸಮರ್ಥರಾಗುವುದು ಒಂದು ಕಷ್ಟಮಯವಾದುದಲ್ಲವೇ?

ಇನ್ನೊಂದೆಡೆಯಲ್ಲಿ, ನೀವು ಈಗಾಗಲೇ ದೀಕ್ಷಾಸ್ನಾನ ಹೊಂದಿದ್ದರೆ, ದೇವರೊಡನೆ ಆತನ ಮಗುವಾದ ನಿಮ್ಮ ಸಂಬಂಧವು ಯಾವುದಾಗಿರುತ್ತದೆ? ನೀನು ನಂಬಿಗಸ್ತ ಮಗನಾಗಿದ್ದೀಯೋ? ನಾವು ಕೆಲಸಾರಿ ಯೋಹಾನ 9:31ನ್ನು ವ್ಯಾಖ್ಯಾನಿಸುತ್ತೇವೆ, "ಭಕ್ತಿಹೀನರ ಪ್ರಾರ್ಥನೆಯನ್ನು ದೇವರು ಕೇಳುವುದಿಲ್ಲ." ಈ ಮಾತನ್ನು ನಾವು ಹೊರಗಿನ ಪಾಪಿಗಳಿಗೆಗೆ ಅನ್ವಯಿಸುತ್ತೇವೆ.

ಇದು ದೇವರ ಅಪನಂಬಿಗಸ್ತ ಮಕ್ಕಳ ಬಗೆಗೆ ಮಾತನಾಡುವುದಾಗಿದೆ ಮತ್ತು ಹಳೆಯ ಒಡಂಬಡಿಕೆಯಲ್ಲಿನ ಪರಿಚ್ಛೇದಗಳಂತಾದ ಕೀರ್ತನೆ 66:18ರಲ್ಲಿನ "ನಾನು ಕೆಟ್ಟತನದ ಮೇಲೆ ಮನಸ್ಸಿಟ್ಟಿದ್ದರೆ ಸ್ವಾಮಿಯು ನನ್ನ ವಿಜ್ಞಾಪನೆಯನ್ನು ಕೇಳುತ್ತಿದ್ದಿಲ್ಲ" ಎಂಬುದರ ಆಧಾರಿತವಾದ ಹೇಳಿಕೆಯ ಮೇಲೆ ಕುರುಡನು ಇರುತ್ತಾನೆ ಎಂಬುದರಲ್ಲಿ ಸಂಶಯವೇ ಇಲ್ಲ. ತಿರುಗಿ ನಾನು ಹೇಳುತ್ತೇನೆ, ದೇವರೆಡೆಗೆ ಬರಲು ಅಸಮರ್ಥರಾಗುವದು ಎಂಥ ದುರಂತವಲ್ಲವೇ! ನಿನ್ನ ಜೀವನವು ಸರಿಯಾಗಿ ಇಲ್ಲದೇ ಹೋದರೆ ಆತನ ಮುಂದೆ ನೀನು ಬರಲಾರಿ.

ಉತ್ತರಿಸಿದ ಪ್ರಾರ್ಥನೆಯ "ರಹಸ್ಯ" ಎಂದರೆ ಒಬ್ಬನು ನೀತಿವಂತನಾದ ಪುರುಷನಲ್ಲಿ, ನೀತಿವಂತ ಸ್ತ್ರೀಯಲ್ಲಿ ನೀತಿವಂತ ಯೌವನಸ್ಥನಲ್ಲಿ ನೀತಿವಂತರಾಗಿರುವದೇ. ದೇವರೊಂದಿಗೆ "ಸರಿಯಾಗಿ" ಇರಿ ಮತ್ತು ಪ್ರಾರ್ಥನೆಗೆ ಉತ್ತರಿಸಾದ "ರಹಸ್ಯಗಳನ್ನು ಹುಡುಕಿರಿ"!

---

ಟಿಪ್ಪಣಿಗಳು

[1]ಪಾಠ 4ರಲ್ಲಿನ ಟಿಪ್ಪಣಿಗಳನ್ನು ನೋಡಿರಿ. ಆತನು ಯೋನನಂತಿರದಿದ್ದರೂ, ಆತನು ಚಾರೆಫ್ತಾದ ವಿಧವೆಯ ಮಗನಾಗಿರಬಹುದು. ಇನ್ನೊಂದು ಸಾಧ್ಯತೆಯೆಂದರೆ ಎಲೀಯನು ಆಹಾಬನೊಂದಿಗೆ ಕರುಣೆಯಿಂದ ಮಾತನಾಡಿದ ನಂತರ ಆತನುಈ ಸೇವಕನನ್ನು ಆತನಿಗೆ ಕೊಟ್ಟಿರಬಹುದು. [2]ಸಿಸೇರಿಯದ ರಥವು ಕೀಷೋನಿನ ಮಣ್ಣಿನ ರಾಡಿಯಲ್ಲಿ ಇತ್ತು (ನ್ಯಾಯಸ್ಥಾಪಕರು 4:15; 5:21). [3]1 ಅರಸು 21:1.

---

## ಪಾಠದ ರೂಪರೇಶೆ

**ಪೀಠಿಕೆ**

A. ಅನೇಕ ಜನರು ಆ ದಿನದಲ್ಲಿ ಎಲೀಯನು ಬಾಳನ 450 ಪ್ರವಾದಿಗಳಿಗೆ ಸವಾಲನ್ನು ಕೊಂಟ್ಟದ್ದು ಆತನ ಜೀವನದಲ್ಲೇ ಅತೀ ದೊಡ್ಡ ದಿನ ಎಂದು ಭಾವಿಸಿದ್ದರು. ಹಾಗಲ್ಲ: ಪರಾಕಾಷ್ಟತೆಯು ಇನ್ನೂ ಮುಂದಿದೆ (1 ಅರಸು 18:1ನ್ನು ನೋಡಿರಿ).

B. "ಉತ್ತರಿಸಲಾದ ಪ್ರಾರ್ಥನೆಯ ರಹಸ್ಯ" ಎಂಬ ಶೀರ್ಷಿಕೆಯಡಿಯಲ್ಲಿನ 18ನೇಯ ಅಧ್ಯಾಯದ ಈ ಭಾಗವನ್ನು ನಾವು ಅಧ್ಯಯನ ಮಾಡುವದು ಅವಶ್ಯವಾಗಿದೆ.

   1. ಪ್ರಾರ್ಥನೆಯ ಶ್ರೇಷ್ಟ ಉದಾಹರಣೆಯು ಯಾರಾಗಿದ್ದಾರೆ ಎಂದು ನೀವು ಯೋಚಿಸುವವರಾಗಿದ್ದೀರಿ?
   2. ಯಾಕೋಬನು ಎಲೀಯನನ್ನು ಆರಿಸಿದನು (ಯಾಕೋಬ 5:16ಬಿ-18; ನೋಡಿರಿ ಪ್ರಕಟಣೆ 11:6).

I. ಶಕ್ತಿಯುತವಾದ ಪ್ರಾರ್ಥನೆ

A. ದೇವರು ಎಲೀಯನ ಪ್ರಾರ್ಥನೆಗೆ ಉತ್ತರಿಸುತ್ತಾನೆ.

   1. ಎಲೀಯನು ಮನುಷ್ಯರಿಂದ ಅಡುಗುವಿಕೆ ಮತ್ತು ಇತರ ಮನುಷ್ಯರೊಡನೆ ಎದುರಿಸುವಿಕೆ ಇವುಗಳನ್ನು ನಾವು ನೋಡಿದ್ದೇವೆ. ಈಗ ನಾವು ದೇವರೊಡನೆ ಸಂಪರ್ಕದಲ್ಲಿ ಆತನನ್ನು ನೋಡೋಣ.

      a. ಆಹಾಬನಿಗೆ: "ಮೇಲಕ್ಕೆ ಹತ್ತು" (1 ಅರಸು 18:41ಎ) ಎಂದು ಹೇಳಿದನು. ಹಳೆಯ ಒಡಂಬಡಿಕೆಯ ಉದ್ದಕ್ಕೂ ದೇವರ ಅಭಿಷಕ್ತನಿಗೆ ಗೌರವಿಸುವದು ನಡೆದು ಬಂದಿದೆ.

      b. "ದೊಡ್ಡ ಮಳೆಯ ಸದ್ದು ಕೇಳಿಸುತ್ತಿದೆ" (ವಚನ 41ಬಿ). ಎಲೀಯನು

ಇದನ್ನು ತನ್ನ ನಂಬಿಕೆಯ ಕಿವಿಗಳಿಂದ ಕೇಳಿದನು.

c. ಎಲೀಯನು ಮತ್ತು ಆಹಾಬ ಮೇಲಕ್ಕೆ ಹೋದರು (ವಚನ 42ಬಿ). ಆದರೆ ವಿಭಿನ್ನ ಕಾರಣಗಳಿಗಾಗಿ.

d. ಎಲೀಯನು ಪ್ರಾರ್ಥನೆಯಿಂದ ಪ್ರಾರಂಭಿಸಿದನು (ವಚನ 42ಬಿ). "ಪ್ರಾರ್ಥನೆ" ಎಂಬ ಪದವು ಇಲ್ಲಿ ಬಳಸಲ್ಪಟ್ಟಿಲ್ಲ, ಆದರೆ ಯಾಕೋಬನು ಆತನು ಏನು ಮಾಡಿದನು ಎಂಬುದು ದೃಢಪಡಿಸುತ್ತಾನೆ.

e. ಎಲೀಯನು ತನ್ನ ಸೇವಕನಿಗೆ (ಚಾರೆಪ್ತಾದ ವಿಧವೆಯ ಮಗನಿಗೆ?) ನೋಡಲು ಹೇಳಿದನು (ವಚನ 43).

f. ಮೊದಲಿಗೆ ಏನೂ ಸಂಭವಿಸುವುದಿಲ್ಲ (ವಚನ 43ಎ).

2. ಪ್ರಾರ್ಥನೆಯು ಉತ್ತರಿಸಲ್ಪಟ್ಟಿತು.

a. ಚಿಕ್ಕ ಮೋಡವು ಕಾಣಿಸುತ್ತದೆ (ವಚನ 44ಎ) ಅದಷ್ಟೇ ಎಲೀಯನಿಗೆ ಸಾಕಾಗಿತ್ತು. ಆತನು ಆಹಾಬನಿಗೆ ನಿನ್ನ ರಥವನ್ನು ಸಿದ್ಧಪಡಿಸಿಕೋ ಎಂದು ಹೇಳುತ್ತಾನೆ (ವಚನ 44ಬಿ). ನಿಜ ಖಂಡಿತವಾಗಿ ಅಲ್ಲಿ ದೊಡ್ಡ ಮಳೆಯು ಆಯಿತು (ವಚನ 45ಎ).

b. ಎಲೀಯನ ಪ್ರಾರ್ಥನೆಯು ಎಷ್ಟು ಅದ್ಭುತವಾಗಿ ಉತ್ತರಿಸಲ್ಪಟ್ಟಿತು.

(1) ಸಮಗ್ರ ಭೂಮಿಯು ಆಶೀರ್ವದಿಸಲ್ಪಟ್ಟಿತು ಯಾಕೋಬನು ಹೇಳುವಂತೆ "ಭೂಮಿಯು ಬೆಳೆಯಿತು."

(2) ಎಲೀಯನು ಆಶೀರ್ವದಿಸಲ್ಪಟ್ಟನು. 45 ಮತ್ತು 46ನೇಯ ವಚನಗಳನ್ನು ಗಮನಿಸಿರಿ. ಎಲೀಯನು ಎಲ್ಲಿ ಶಕ್ತಿಯನ್ನು ಪಡೆದನು? "*ಕರ್ತನ ಹಸ್ತವು* ಆತನ ಮೇಲಿತ್ತು."

(3) ಆಹಾಬ ಮೂಲಕ ಸಮಸ್ತ ದೇಶಕ್ಕೆ ಆಶೀರ್ವಾದದ ಸಾಮರ್ಥ್ಯವು ಇತ್ತು.

c. ಎಲೀಯನು ಓಡುತ್ತಾ ಹೋಗಿ ಇಜ್ರೇಲಿನ ಬಾಗಿಲಿನ ಬಳಿಯಲ್ಲಿ ಏನೂ ಸಂಭವಿಸುತ್ತದೆ ಎಂಬುದನ್ನು ನೋಡಲು ಕಾಯುತ್ತಾ ನಿಂತುಕೊಂಡನು.

B. ನಮಗೆ ಈ ನಮಗೆ ಏನನ್ನು ಹೇಳುತ್ತದೆ?

1. ಪ್ರಾರ್ಥನೆಯಲ್ಲಿ ಶಕ್ತಿ ಇದೆ, ದೇವರು ಪ್ರಾರ್ಥನೆಗೆ ಉತ್ತರಿಸುವವನಾಗಿದ್ದಾನೆ ಎಂದು ಈ ಕಥೆಯು ಯಾಕೋಬ ಅಧ್ಯಾಯ 5 ನಮಗೆ ಹೇಳುತ್ತದೆ.

a. ವಚನ 16 ರಲ್ಲಿನ ಮೂರು ಶಕ್ತಿಯುತ ಪದಗಳನ್ನು ಗಮನಿಸಿರಿ.

(1) *"ಪರಿಣಾಮಕಾರಿ"*

(2) "ಸಾಧಿಸಲು ಶಕ್ತನಾಗಿರು"

(3) "ಬಲು ಅತ್ಯುನ್ನತವಾದುದನ್ನು ಸಾಧಿಸು"

b. ಯಾಕೋಬನು 17 ಮತ್ತು 18ನೇಯ ವಚನದಿಂದ ಪುರಾವೆಗಳನ್ನು ಕೊಡುತ್ತಾನೆ.

(1) ದೇವರು ಎಲೀಯನ ಪ್ರಾರ್ಥನೆಗೆ ಉತ್ತರಿಸಿದನು.

(2) ದೇವರು ನಿಮ್ಮ ಪ್ರಾರ್ಥನೆಗೂ ಉತ್ತರಿಸುವವನಾಗಿದ್ದಾನೆ ಈ ಪಾಠವನ್ನು ನಾವೂ ಕಲಿಯಲು ನಮ್ಮ ಮಕ್ಕಳಿಗೆ ಕಲಿಸಲೂ ಬಲು ಅವಶ್ಯವಾಗಿದೆ,

2. ಈ ಪಾಠವನ್ನು ನಾವೂ ಕಲಿಯಲು ನಮ್ಮ ಮಕ್ಕಳಿಗೆ ಕಲಿಸಲು ಬಲು

ಅವಶ್ಯವಾಗಿದೆ!

II. ಉತ್ತರಿಸಾದ ಪ್ರಾರ್ಥನೆಯ ರಹಸ್ಯಗಳು
   A. ಉತ್ತರಿಸಾದ ಪ್ರಾರ್ಥನೆಯ ರಹಸ್ಯಗಳಲ್ಲಿ ಒಂದನ್ನು ನೋಡುವ ಮೊದಲು ಯಾವ ಮನುಷ್ಯನು ಪ್ರಾರ್ಥನೆಯು ಶಕ್ತಿಯುತವಾಗಿದ್ದವೂ ಅವನ ಲಕ್ಷಣಗಳನ್ನು ನೋಡುವಾ.
      1. ಆತನು ನಂಬಿಕೆಯ ಮನುಷ್ಯನಾಗಿದ್ದನು (ಯಾಕೋಬ 1:6).
      2. ಆತನು ದೇವರ ಮೇಲೆ ಆತುಕೊಂಡ ಮನುಷ್ಯನಾಗಿದ್ದನು.
      3. ದೇವರೊಡನೆ ಮಾತನಾಡಲು ಸಮಯವನ್ನು ತೆಗೆದುಕೊಳ್ಳು ಮನುಷ್ಯನಾಗಿದ್ದನು.
      4. ಆತನು ವಿನಮ್ರನಾಗಿದ್ದನು.
      5. ಇತರರ ಬಗೆಗೆ ಯೋಚಿಸುವ ಮನುಷ್ಯನಾಗಿದ್ದನು.
      6. ಆತನು ಬಿಡದೇ ಪ್ರಾರ್ಥಿಸುವವನಾಗಿದ್ದನು.
      7. ಆತನು ಪ್ರಾರ್ಥನೆಯಲ್ಲಿ ಅತ್ಯಾಸಕ್ತಿಯುಳ್ಳವನಾಗಿದ್ದನು.
   B. ಈ ಹಿನ್ನಲೆಯಲ್ಲಿ, ಉತ್ತರಿಸಾದ ಪ್ರಾರ್ಥನೆಯ ರಹಸ್ಯಗಳನ್ನು ನೋಡಲು ನಾವು ಸಿದ್ಧರಾಗೋಣ.
      1. ಕೆಲವರು ಮೂರು ಎಲ್‌ಗಳ ಮೇಲೆ ಈ ರಹಸ್ಯವು ನಿಂತಿದೆ ಯೋಚಿ ಸುವವರಾಗಿರುತ್ತಾರೆ:
         a. ಉದ್ದವಾದದ್ದು
         b. ಭಾಷೆ
         c. ದೊಡ್ಡ ಧ್ವನಿ
      2. ಯಾಕೋಬನು ದೇವರೊಡನೆ ಇರುವ ಸಂಬಂಧಗಳು "ರಹಸ್ಯ" ಆಗಿದೆ ಎಂದು ಹೇಳುತ್ತಾನೆ: ನೀತಿವಂತ ಮನುಷ್ಯನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿವೆ.
         a. ದೇವರೊಡನೆ ಸರಿಯಾಗಿರುವದು ನಮಗೆ ಅವಶ್ಯವಿದೆ.
         b. ನಾವು ಎಲೀಯನಂತೆ ಎಂದಿಗೂ ಪ್ರಾರ್ಥಿಸುವುದಿಲ್ಲ ಎಂದು ಯೋಚಿಸುವವರಾಗಿರುತ್ತೇವೆ. ಆದರೆ "ಆತನೂ ನಮ್ಮಂತ ಸ್ವಭಾವವುಳ್ಳ ಮನುಷ್ಯನನಾಗಿದ್ದನು." ಆತನು ಅತನ ಪ್ರಾರ್ಥನೆಗಳು ಉತ್ತರಿಸಲ್ಪಟ್ಟವು ಯಾಕೆಂದರೆ ಆತನು ಪರಿ ಪೂರ್ಣನಾಗಿದ್ದನು ಎಂದಲ್ಲ ಆದರೆ ಅವನು "ಆತನು ದೇವರ ಮುಂದೆ ಸರಿಯಾಗಿ ನಿಂತುಕೊಂಡಿದ್ದನು" (1 ಅರಸು 17:1). ನಾವು ಸಹ ಹಾಗೆ ಮಾಡಬಹುದು.

**ಮುಕ್ತಾಯ**

   A. ದೇವರೊಡನೆ ನಮ್ಮ ಸಂಬಂಧವು ಏನಾಗಿದೆ?
      1. ಆತನನ್ನು "ತಂದೆ" ಎಂದು ಆತನ ಬಳಿಗೆ ಹೋಗಲು ನಮಗೆ ಹಕ್ಕಿದೆಯಾ? (ಗಲಾತ್ಯ 3:26, 27; ಯೋಹಾನ 3:3-5).
      2. ನಾವು ಈಗಾಗಲೇ ದೇವರ ಮಕ್ಕಳಾಗಿದ್ದರೆ ನಾವು ನಂಬಿಗಸ್ತ ಮಕ್ಕಳೇ ಆಗಿದ್ದೇವೆ (ಯೋಹಾನ 3:31; ಕೀರ್ತನೆ 66:18)?
   B. ನಿಮಗೆ ಸಹಾಯ ಮಾಡುವಂತಾಗಲಿ.